# ಪ್ರೊಸೆಸ್ ಸರ್ವರ್ ಮತ್ತು

# ಬೇಲಿಫರಿಗೆ ಸಮನ್ಸ್ ಮತ್ತು

# ವಾರೆಂಟ್‌ಗಳನ್ನು ಜಾರಿಗೊಳಿಸುವ

# ಹಾಗೂ

# ನ್ಯಾಷನಲ್ ಸರ್ವೀಸ್ ಅಂಡ್

# ಟ್ರ್ಯಾಕಿಂಗ್ ಆಫ್ ಎಲೆಕ್ಟ್ರಾನಿಕ್

# ಪ್ರೋಸೆಸಸ್ (NSTEP) ಬಗ್ಗೆ

# ಕೈಪಿಡಿ

## ಮುನ್ನುಡಿ

ಸಮನ್ಸುಗಳನ್ನು ಜಾರಿಗೊಳಿಸುವುದು ಮತ್ತು ವಾರಂಟ್‌ಗಳನ್ನು ಕಾರ್ಯಗತಗೊಳಿಸುವುದು, ನ್ಯಾಯ ಪ್ರಕ್ರಿಯೆಯ ಒಂದು ಪ್ರಮುಖ ಭಾಗ. ವ್ಯಾಜ್ಯಗಳ ತೀರ್ಮಾನಕ್ಕಾಗಿ ಸಮನ್ಸುಗಳನ್ನು ಮತ್ತು ನೋಟೀಸುಗಳನ್ನು ನಿಗದಿತ ಸಮಯದೊಳಗೆ ಜಾರಿಗೊಳಿಸುವುದು ಅತ್ಯಾವಶ್ಯಕ ಸಮನ್ಸುಗಳ ಜಾರಿ ಗೊಳಿಸುವಿಕೆಯಲ್ಲಿ ಆಗುತ್ತಿರುವ ವಿಳಂಬ, ವ್ಯಾಜ್ಯಗಳ ತೀರ್ಮಾನಕ್ಕೆ ಆಗುತ್ತಿರುವ ವಿಳಂಬಕ್ಕೆ ಒಂದು ಮುಖ್ಯ ಕಾರಣ, ಅಮಲ್ಜಾರಿ ಕೇಸುಗಳ ವಾರೆಂಟ್‌ಗಳನ್ನು ಕಾರ್ಯಗತಗೊಳಿಸುವಲ್ಲಿ ಆಗುತ್ತಿರುವ ವಿಳಂಬ ಡಿಕ್ರಿಯ ಫಲ ಪಕ್ಷಗಾರರಿಗೆ ಯುಕ್ತ ಸಮಯದಲ್ಲಿ ಸಿಗದ ಹಾಗೆ ಮಾಡುತ್ತದೆ. ಬಹಳ ವರ್ಷಗಳ ಹಿಂದೆ, ಪ್ರಿವಿ ಕೌನ್ಸಿಲ್ **ರಾಜ ದುರ್ಭಂಗ ರವರು ಮಹಾರಾಜ ಕೊನಾರ್ ರಾಮ ಪ್ರತಾಪ್ ಸಿಂಗ್** ವಿರುದ್ಧ ಹೂಡಿದ್ದ ಪ್ರಕರಣದ ತೀರ್ಪಿನಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ *"ಭಾರತದ ಕಕ್ಷಿದಾರರ ನಿಜವಾದ ಕಷ್ಟ ಡಿಕ್ರಿಯನ್ನು ಪಡೆದುಕೊಂಡ ನಂತರ ಆರಂಭವಾಗುತ್ತದೆ"* ಎಂದು ಹೇಳಿದೆ **(1972 SCC ONLINE PC 16).**

ವ್ಯಾಜ್ಯಗಳ ತೀರ್ಮಾನದಲ್ಲಿ ಮತ್ತು ಡಿಕ್ರಿಯ ಅಮಲ್ಜಾರಿಯಲ್ಲಿ ಆಗುತ್ತಿರುವ ವಿಳಂಬದಿಂದಾಗಿ ಜನರಿಗೆ ನ್ಯಾಯಾಲಯದ ಮೇಲೆ ಇರುವ ನಂಬಿಕೆ ಕುಸಿಯುತ್ತಿದೆ ಹಾಗೂ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡುತ್ತಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯ ಇತ್ತೀಚೆಗೆ ***ರಾಹುಲ್ ಎಸ್ ಶಾ ವಿರುದ್ಧ ಜಿನೇಂದ್ರ ಕುಮಾರ್ ಗಾಂಧಿ, ((2021) 6*** SCC 418) ಕೇಸಿನಲ್ಲಿ ನೀಡಿದ ತೀರ್ಪಿನಲ್ಲಿ ಅಮಲ್ಜಾರಿ ಕೇಸುಗಳಲ್ಲಿ ಆಗುತ್ತಿರುವ ವಿಳಂಬ ಮತ್ತು ಕಾರಣಗಳ ಬಗ್ಗೆ ವಿವರವಾಗಿ ಚರ್ಚಿಸಿ ಹಲವಾರು ನಿರ್ದೇಶನಗಳನ್ನು ನೀಡಿದೆ

ತದನಂತರ ***ಪರಿಯಮ್ಮಾಲ್ ವಿ. V/S ವಿ. ರಾಜಮಣಿ, (2025 SCC ONLINE SC 507)*** ಎಂಬ ತೀರ್ಪಿನಲ್ಲಿ ರಾಹುಲ್ ಎಸ್ ಶಾ ಕೇಸಿನಲ್ಲಿ ನೀಡಿದ ತೀರ್ಪನ್ನು ಉಲ್ಲೇಖಿಸುತ್ತಾ ಅಮಲ್ಜಾರಿ ಪ್ರಕರಣಗಳನ್ನು ಆರು ತಿಂಗಳು ಒಳಗೆ ವಿಲೇವಾರಿ ಮಾಡತಕ್ಕುದ್ದು, ಇಲ್ಲದಿದ್ದಲ್ಲಿ ಮಾನ್ಯ ಉಚ್ಚನ್ಯಾಯಾಲಯ ಸಂಬಂಧಪಟ್ಟ ಆಧಿಕಾರಿಗಳ ವಿರುಧ್ಧ ಆಡಳಿತಾತ್ಮಕ ಕ್ರಮ ಕೈ ಗೊಳ್ಳಬೇಕು ಎಂದು ಹೇಳಿದೆ.

ಸರ್ವೋಚ್ಚ ನ್ಯಾಯಾಲಯ ನೀಡಿದ ನಿರ್ದೇಶನದನ್ವಯ ಅಮಲ್ಜಾರಿ ಕೇಸುಗಳನ್ನು ಅತಿ ಶೀಘ್ರದಲ್ಲಿ ವಿಲೇವಾರಿ ಮತ್ತು ಸಮನ್ಸುಗಳ ಶೀಘ್ರ ಜಾರಿ ಮಾಡಲು ಅನುಕೂಲವಾಗಲೆಂದು, ಈ ಕೈಪಿಡಿಯನ್ನು ರಚಿಸಲಾಗಿದೆ.

*****

**`ಪ್ರೊಸೆಸ್ ಸರ್ವರ್ ಗಳಿಗೆ ಸಮನ್ಸುಗಳನ್ನು ಜಾರಿಮಾಡುವ ಮತ್ತು ಬೇಲೀಫರಿಗೆ ವಾರಂಟುಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಕೈಪಿಡಿ**


| ಕ್ರಮ ಸಂಖ್ಯೆ | ವಿಷಯ ಸೂಚಿ | ಪುಟ ಸಂಖ್ಯೆ |
|---|---|---|
| 1 | ಸಮನ್ಸುಗಳನ್ನು ಪ್ರತಿವಾದಿ/ಎದುರುದಾರರಿಗೆ ಜಾರಿಗೊಳಿಸುವಿಕೆಗೆ ಸಂಬಂಧಿಸಿದ ಕಾನೂನು ಅಂಶಗಳು ಮತ್ತು ವಿಧಾನ | 6 – 12 |
| 2 | ಸಾಕ್ಷಿ ಸಮನ್ಸನ್ನು ಜಾರಿಗೊಳಿಸುವ ಮತ್ತು ವಾರಂಟನ್ನು ಕಾರ್ಯಗತಗೊಳಿಸುವ ಬಗೆಗಿನ ಕಾನೂನು ಅಂಶಗಳು ಮತ್ತು ವಿಧಾನ | 13 – 15 |
| 3 | ದಸ್ತಗಿರಿ ನೋಟೀಸನ್ನು ಜಾರಿಗೊಳಿಸುವ ಮತ್ತು ದಸ್ತಗಿರಿ ವಾರಂಟ್‌ನ್ನು ಕಾರ್ಯಗತಗೊಳಿಸುವ ಬಗೆಗಿನ ಕಾನೂನು ಅಂಶಗಳು ಮತ್ತು ವಿಧಾನ . | 16 – 20 |
| 4 | ನಿರ್ದಿಷ್ಟ ಸ್ವತ್ತಿನ ಸ್ವಾಧೀನ ಡಿಕ್ರಿ , ದಾಂಪತ್ಯ ಹಕ್ಕಿನ ಪೂರ್ವ ಸ್ಥಿತಿ ಪಾಲನೆ ಮತ್ತು ನಿರ್ಬಂಧಕಾಜ್ಞೆ ಡಿಕ್ರಿ, ದಸ್ತಾವೇಜು ಬರೆದು ಕೊಡಲು ಆದೇಶಿಸಿದ ಡಿಕ್ರಿ, ಸ್ಥಿರ ಸ್ವತ್ತಿನ ಡಿಕ್ರಿ ಮತ್ತು ಬಾಡಿಗೆದಾರ ಅನುಭೋಗದಲ್ಲಿರುವ ಡಿಕ್ರಿಯ ಅಮಲ್ಜಾರಿ ವಿಧಾನಗಳು . | 21 - 24 |
| 5 | ಚರಸ್ವತ್ತುಗಳ ಜಪ್ತಿ, ಸಾಗಾಣಿಕೆ ಮತ್ತು ಸಂರಕ್ಷಿಸುಲು ಇರುವ ವಿಧಾನ | 25 - 29 |
| 6 | ಸ್ಥಿರಾಸ್ತಿಗಳನ್ನು ಜಪ್ತಿ ಮಾಡುವ ಮತ್ತು ಚರ ಹಾಗು ಸ್ಥಿರಾಸ್ತಿಗಳನ್ನು ಮಾರಾಟ ಮಾಡುವ ಬಗೆಗಿನ ಕಾನೂನು ಅಂಶಗಳು ಮತ್ತು ವಿಧಾನ | 30 - 38 |
| 7 | ಪ್ರೊಸಸ್ ಸರ್ವರ್ ಮತ್ತು ಬೇಲಿಫ್ಗಳು ಎದುರಿಸುವ ಸಮಸ್ಯೆಗಳು ಮತ್ತು ಅದಕ್ಕೆ ಪರಿಹಾರ | 39 - 42 |
| 8 | ನ್ಯಾಷನಲ್ ಸರ್ವೀಸ್ ಅಂಡ್ ಟ್ರ್ಯಾಕಿಂಗ್ ಆಫ್ ಎಲೆಕ್ಟ್ರಾನಿಕ್ ಪ್ರೋಸೆಸಸ್ (NSTEP) ಬಳಕೆದಾರರ ಕೈಪಿಡಿ | 43 - 48 |
| 9 | ಸಮನ್ಸ ಮತ್ತು ವಾರೆಂಟ ನಮೂನೆಗಳು | 49 - 101 |

# ವಿಷಯ ಸೂಚಿ :1

## ಸಮನ್ಸುಗಳನ್ನು ಪ್ರತಿವಾದಿ/ಎದುರುದಾರರಿಗೆ ಜಾರಿಗೊಳಿಸುವಿಕೆಗೆ ಸಂಬಂಧಿಸಿದ ಕಾನೂನು ಅಂಶಗಳು ಮತ್ತು ವಿಧಾನ

ಸಮನ್ಸುಗಳನ್ನು ನ್ಯಾಯಾಲಯವು ದಾವೆಯಲ್ಲಿ ಸಮನ್ಸನ್ನು ಮತ್ತು ಅರ್ಜಿಯಲ್ಲಿ ನೋಟಿಸನ್ನು ಪಕ್ಷಗಾರರಿಗೆ ಜಾರಿಗೊಳಿಸುವಂತೆ ಆದೇಶಿಸಿದ ನಂತರ, ಸಮನ್ಸು ಮತ್ತು ನೋಟೀಸನ್ನು ಪ್ರೊಸೆಸ್ ವಿಭಾಗಕ್ಕೆ ಕಳುಹಿಸಲಾಗುತ್ತದೆ. ಎನ್-ಸ್ಟೆಪ್ ವ್ಯವಸ್ಥೆ ಜಾರಿಯಾಗುವುದಕ್ಕಿಂತ ಪೂರ್ವದಲ್ಲಿ ಸಮನ್ಸು ಮತ್ತು ನೋಟಿಸನ್ನು ವಾದಪತ್ರದ ಮತ್ತು ಅರ್ಜಿಯ ಪ್ರತಿ ಜೊತೆಯಲ್ಲಿ ನಾಜಿರ್ ಸೆಕ್ಷನ್‌ಗೆ ಕಳುಹಿಸಲಾಗುತ್ತಿತು. ಆ ನಂತರ ಅವುಗಳನ್ನು ಪ್ರೊಸೆಸ್ ಸರ್ವರ್‌ಗಳಿಗೆ ಜಾರಿಗೊಳಿಸಲು ನೀಡಲಾಗುತ್ತಿತ್ತು. ಎನ್-ಸ್ಟೆಪ್ ಜಾರಿಯಾದ ನಂತರ ಕೆಲವೊಂದು ಬದಲಾವಣೆಗಳು ಆಗಿದ್ದು, ಅದರ ಬಗ್ಗೆ ಕೈಪಿಡಿಯ ಕೊನೆಯ ವಿಷಯ ಸೂಚಿಯಲ್ಲಿ ಹೇಳಲಾಗಿದೆ. ಸಮನ್ಸುಗಳ ಜಾರಿಗೊಳಿಸುವಿಕೆಯ ಕಾನೂನಿನಲ್ಲಿ ಇತ್ತೀಚೆಗೆ ಕೆಲವೊಂದು ಬದಲಾವಣೆಗಳು ಆಗಿವೆ.

**<u>ಸಮನ್ಸುಗಳನ್ನು ಜಾರಿಗೊಳಿಸುವಿಕೆಗೆ ಆದೇಶಿಸುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 27 ರಿಂದ 32 ಮತ್ತು ಕ್ರಮಾದೇಶ 5 ಮತ್ತು ಕರ್ನಾಟಕ ಸಿವಿಲ್ ವ್ಯವಹಾರ ನಿಯಮಗಳ 21 ನೇ ಅಧ್ಯಾಯದ ನಿಯಮ 210 ರಿಂದ 218 ರಲ್ಲಿ ಸಮ್ಮನ್ಸುಗಳನ್ನು ಪಕ್ಷಗಾರರಿಗೆ ಮತ್ತು ಸಾಕ್ಷಿದಾರರಿಗೆ ಜಾರಿ ಮಾಡುವಾಗ ಅನುಸರಿಸ ಬೇಕಾದ ಕಾನೂನು ಮತ್ತು ವಿಧಾನಗಳ ಬಗ್ಗೆ ಹೇಳಿದೆ, ಇವುಗಳನ್ನು ಪ್ರತಿಯೊಬ್ಬ ಪ್ರೊಸೆಸ್ ಸರ್ವರ್ ಕೂಡ ಓದಿ ತಿಳಿದುಕೊಳ್ಳಬೇಕು.

ಸಮನ್ಸುಗಳನ್ನು ಅಂಚೆ, ಕೊರಿಯರ್ ಮತ್ತು ಇ-ಮೇಲ್ ಮುಖಾಂತರ ಕೂಡ ಜಾರಿಮಾಡಲು ಅವಕಾಶವಿದೆ. ಇ-ಮೇಲ್ ಮತ್ತು ಕೊರಿಯರ್ ಮೂಲಕ ಸಮನ್ಸುಗಳನ್ನು ಜಾರಿಮಾಡುವ ಬಗ್ಗೆ ಪ್ರತ್ಯೇಕ ನಿಯಮಾವಳಿಗಳನ್ನು ರಚಿಸಲಾಗಿದೆ.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 27, ಕ್ರಮಾದೇಶ 5 ನಿಯಮ 1 ಸಮನ್ಸನ್ನು ಜಾರಿಗೊಳಿಸಲು ಆದೇಶಿಸುವಾಗ ನ್ಯಾಯಾಲಯವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹೇಳುತ್ತದೆ. ಕ್ರಮಾದೇಶ 5ರ ನಿಯಮ 2 ವಾದಪತ್ರವನ್ನು ಸಮನ್ಸ್‌ಗೆ ಲಗತ್ತಿಸಬೇಕು ಎಂದು ಹೇಳುತ್ತದೆ. ಸಮನ್ಸ್‌ನಲ್ಲಿ ಹಾಜರಾತಿಯ ದಿನಾಂಕವನ್ನು ನಮೂದಿಸತಕ್ಕದು. 2025ರ ತಿದ್ದುಪಡಿ ಪ್ರಕಾರ ವಾದಪತ್ರದ ಜೊತೆ ದಾಖಲಾತಿಗಳನ್ನು, ಮಧ್ಯಂತರ ಅರ್ಜಿಗಳು ಇದ್ದಲ್ಲಿ, ಅವುಗಳನ್ನು ಮತ್ತು ಪ್ರಮಾಣಪತ್ರಗಳನ್ನು ಲಗತ್ತಿಸಬೇಕು. ಕ್ರಮಾದೇಶ 5 ರ ನಿಯಮ 10, ಸಮನ್ಸ್‌ನ ಒಂದು ಪ್ರತಿಯನ್ನು ನೀಡುವ ಮೂಲಕ ಸಮನ್ಸ್‌ನ್ನು ಜಾರಿ ಮಾಡಬೇಕು ಎಂದು ಹೇಳುತ್ತದೆ. ಒಬ್ಬನಿಗಿಂತ ಹೆಚ್ಚು ಪ್ರತಿವಾದಿಗಳು ಇದ್ದಲ್ಲಿ, ಸಮನ್ಸ್‌ನ್ನು ಪ್ರತಿಯೊಬ್ಬ ಪ್ರತಿವಾದಿ ಮೇಲೆ ಜಾರಿ ಮಾಡತಕ್ಕದು ಎಂದು ನಿಯಮ 11ರಲ್ಲಿ ಹೇಳಿದೆ.

**<u>ಸಮನ್ಸುಗಳನ್ನುಜಾರಿಮಾಡುವ ವಿಧಾನ:</u>**

ಸಮನ್ಸುಗಳನ್ನು ಯಾವ ವಿಧಾನಗಳಲ್ಲಿ ಜಾರಿ ಮಾಡಬಹುದು ಎಂಬುದನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 5ರ ನಿಯಮ 12 ರಿಂದ 25 ರಲ್ಲಿ ಹೇಳಿದೆ. ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ಅಧ್ಯಾಯ 21 ರ ನಿಯಮ, 210 ರಿಂದ 212 ರಲ್ಲಿ ಸಮನ್ಸುಗಳನ್ನು ಅಂಟಿಸುವ ಮೂಲಕ ಜಾರಿಗೊಳಿಸುವಾಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹೇಳಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 5ರ ನಿಯಮ 11 ಪ್ರತಿವಾದಿಗಳು ಒಬ್ಬರಿಗಿಂತ ಜಾಸ್ತಿ ಇದ್ದಲ್ಲಿ ಪ್ರತಿಯೊಬ್ಬ ಪ್ರತಿವಾದಿಗೂ ಪ್ರತ್ಯೇಕವಾಗಿ ಸಮನ್ಸ ನ್ನು ಜಾರಿ ಮಾಡಬೇಕು ಎಂದು ಹೇಳುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 5ರ ನಿಯಮ 14 ಸಾಧ್ಯವಾದ ಮಟ್ಟಿಗೆ ಸಮನ್ಸುಗಳನ್ನು ಖುದ್ದಾಗಿ ಜಾರಿ ಮಾಡಬೇಕು ಅಥವಾ ಪ್ರತಿವಾದಿಯ ಏಜೆಂಟ್ ಇದ್ದಲ್ಲಿ ಆತನಿಗೆ ಜಾರಿ ಮಾಡಬೇಕು ಎಂದು ಹೇಳುತ್ತದೆ.

ವ್ಯವಹಾರಕ್ಕೆ ಸಂಬಂಧಿಸಿದ ದಾವೆ ಆಗಿದ್ದಲ್ಲಿ, ಪ್ರತಿವಾದಿಯ ಪರವಾಗಿ ವ್ಯವಹಾರ ನಡೆಸುವವನಿಗೆ, ಸ್ಥಿರ ಆಸ್ತಿಗೆ ಸಂಬಂಧಿಸಿದ ದಾವೆಯ ಸಮನ್ಸಾಗಿದ್ದಲ್ಲಿ ಸದರಿ ಸ್ಥಿರಾಸ್ತಿಯನ್ನು ನೋಡಿಕೊಳ್ಳಲು ನೇಮಿಸಿದ ವ್ಯಕ್ತಿಗೆ ಜಾರಿ ಮಾಡಬಹುದು ಎಂದು ಹೇಳುತ್ತದೆ.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 5ರ ನಿಯಮ 15 ರಲ್ಲಿ, ಯಾವ ಸಂದರ್ಭಗಳಲ್ಲಿ ಪ್ರತಿವಾದಿಯ ಕುಟುಂಬದ ವಯಸ್ಕ ಸದಸ್ಯರಿಗೆ ಸಮನ್ಸನ್ನು ಜಾರಿ ಮಾಡಬಹುದು ಎಂದು ಹೇಳುತ್ತದೆ. ಇಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಸಂಗತಿ ಏನೆಂದರೆ. ಸಮನ್ಸ್ ಅನ್ನು ಜಾರಿ ಮಾಡಿದ ನಂತರ ಹಿಂಬರಹವನ್ನು ಜಾರಿ ಮಾಡಿದ ವ್ಯಕ್ತಿಯ ವಿವರಗಳನ್ನು ಬರೆಯಬೇಕು. ಆನಂತರ ಸಮನ್ಸನ್ನು ಪಡೆದುಕೊಂಡ ವ್ಯಕ್ತಿಯು ಸಹಿ ಮಾಡಬೇಕು ಎಂದು ನಿಯಮ 16 ರಲ್ಲಿ ಹೇಳುತ್ತದೆ.

2025ರ ತಿದ್ದುಪಡಿ ಪ್ರಕಾರ, ಸಮನ್ಸನ್ನು ಪ್ರತಿವಾದಿಗೆ ಜಾರಿಮಾಡಿದಾಗ ಆತನ ಸಹಿಯನ್ನು ಪಡೆಯಬೇಕು ಮತ್ತು ಆತನ ಫೋನ್ ನಂಬರ್, ಮೊಬೈಲ್ ನಂಬರ್ ಮತ್ತು ಇ-ಮೇಲ್ ವಿಳಾಸವನ್ನು ಪಡೆಯಬೇಕು. ಸಮನ್ಸನ್ನು ಪ್ರತಿವಾದಿಯ ಏಜೆಂಟ್ ಇಲ್ಲ ಪ್ರತಿವಾದಿಯ ಪರವಾಗಿ ಬಾರೆ ವ್ಯಕ್ತಿಗೆ ಜಾರಿಮಾಡಿದಲ್ಲಿ, ಸದರಿ ವ್ಯಕ್ತಿಯ ಸಹಿಯನ್ನು ಪಡೆಯಬೇಕು, ಮತ್ತು ಆ ವ್ಯಕ್ತಿ ಪ್ರತಿವಾದಿಗೆ ಹೇಗೆ ಸಂಬಂಧ ಮತ್ತು ಆತನ ಫೋನ್ ನಂಬರ್, ಮೊಬೈಲ್ ನಂಬರ್ ಮತ್ತು ಇ-ಮೇಲ್ ವಿಳಾಸವನ್ನು ಪಡೆಯಬೇಕು.

ಹಿಂಬರಹದಲ್ಲಿ ಯಾರಿಗೆ ಜಾರಿ ಮಾಡಲಾಗಿದೆ ಮತ್ತು ಯಾವ ವಿಧಾನದ ಮೂಲಕ ಜಾರಿಮಾಡಲಾಗಿದೆ ಎಂಬುದನ್ನು ವಿವರವಾಗಿ ಬರೆಯ ತಕ್ಕದು. ಏಜೆಂಟ್ ಇಲ್ಲ ವಯಸ್ಕ ಸಂಬಂಧಿಕರಿಗೆ ಜಾರಿ ಮಾಡಿದಾಗ ಯಾಕೆ ಪಕ್ಷಗಾರನಿಗೆ ಜಾರಿ ಮಾಡಲು ಆಗಿಲ್ಲ ಎಂಬುದನ್ನು ಬರೆಯಬೇಕು. ಏಜೆಂಟ್ ಇಲ್ಲ, ಸಂಬಂಧಿಕರ ವಿವರಗಳನ್ನು ಬರೆಯಬೇಕು. 2025ರ ತಿದ್ದುಪಡಿ ಪ್ರಕಾರ ಯಾವ ರೀತಿ ಸಮನ್ಸ ಪಡೆದ ವ್ಯಕ್ತಿ ಪಕ್ಷಗಾರನಿಗೆ ಸಂಬಂಧ ಮತ್ತು ಅವರ ಫೋನ್ ನಂಬರ್ ಇಲ್ಲ ಇಮೇಲ್ ವಿಳಾಸವನ್ನು ಪಡೆಯಬೇಕು. ನ್ಯಾಯಲಯಕ್ಕೆ ಸಮನ್ಸ ಯಾವ ರೀತಿ ಜಾರಿಯಾಗಿದೆ ಎಂಬುದರ ಸಂಪೂರ್ಣ ವಿವರವು ಹಿಂಬರಹ ಇಲ್ಲಾ ವರದಿಯಲ್ಲಿ ಇರಬೇಕು.

ಸಮನ್ಸನ್ನು ಜಾರಿಮಾಡಲು ಆಗದೇ ಇದ್ದ ಪಕ್ಷದಲ್ಲಿ, ಯಾವ ಕಾರಣಕ್ಕಾಗಿ ಸಮನ್ಸನ್ನು ಜಾರಿ ಮಾಡಲು ಆಗಿಲ್ಲ ಎಂಬುದನ್ನು ವಿವರವಾಗಿ ವರದಿ ಇಲ್ಲ ಹಿಂಬರಹದಲ್ಲಿ ನಮೂದಿಸಬೇಕು. ಇಂತಹ ವಿವರಗಳು ಮುಂದೆ ಯಾವರೀತಿಯಲ್ಲಿ ಸಮನ್ಸನ್ನು ಜಾರಿಗೊಳಿಸಲು ಕ್ರಮಕೈಗೊಳ್ಳಬೇಕು ಏಂಬುದರ ಬಗ್ಗೆ ನ್ಯಾಯಾಲಯಕ್ಕೆ ಸ್ಪಷ್ಟತೆಯನ್ನು ನೀಡುತ್ತದೆ.

**<u>ಪಕ್ಷಗಾರನ ಏಜೆಂಟ್, ಸಂಬಂಧಿಕರಿಗೆ ಇಲ್ಲ ಸಮನ್ಸುಗಳನ್ನು ಅಂಟಿಸುವ ಮೂಲಕ ಜಾರಿಗೊಳಿಸುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 5ರ ನಿಯಮ 17 ರಲ್ಲಿ ಪ್ರತಿವಾದಿ ಸಮನ್ಸನ್ನು ಸ್ವೀಕರಿಸಲು ನಿರಾಕರಿಸಿದರೆ ಅಥವಾ ಆತನ ಪರವಾಗಿ ಸಮನ್ಸುಗಳನ್ನು ಪಡೆಯಲು ಅರ್ಹರಾದವರು ಜಾರಿ ಮಾಡಲು ಹೋದಾಗ ಪ್ರತಿವಾದಿ ವಿಳಾಸದಲ್ಲಿ ಇಲ್ಲದೇ ಇದ್ದಾಗ ಹೇಗೆ ಸಮನ್ಸನ್ನು ಜಾರಿ ಮಾಡಬೇಕು ಎಂಬುದನ್ನು ಹೇಳುತ್ತದೆ. ಈ ನಿಯಮದ ಪ್ರಕಾರ ಸಮನ್ಸ್ ನ್ನು ಜಾರಿ ಮಾಡಲು ಆತನ ವಿಳಾಸಕ್ಕೆ ಹೋದಾಗ. ಆತ ಅಲ್ಲಿ ಇಲ್ಲದೇ ಇದ್ದಾಗ ಮತ್ತು ಆತನ ಪರವಾಗಿ ಏಜೆಂಟ್ ಅಥವಾ ವಯಸ್ಕ ಸಂಬಂಧಿಕರು, ಇಲ್ಲದೆ ಇದ್ದಾಗ ಅಥವಾ ಅವರುಗಳು ಇದ್ದು ಸಮನ್ಸನ್ನು ತೆಗೆದುಕೊಳ್ಳಲು ನಿರಾಕರಿಸಿದಾಗ, ಆತನ ಮನೆ ಇಲ್ಲ ಕಛೇರಿಯ ಹೊರಬಾಗಿಲ ಮೇಲೆ ಅಥವಾ ಎದ್ದು ಕಾಣುವ ಇತರ ಬಾಗದ ಮೇಲೆ ಸಮನ್ಸನ ಪ್ರತಿಯನ್ನು ಅಂಟಿಸುವ ಮೂಲಕ ಸಮನ್ಸನ್ನು ಜಾರಿಮಾಡಬಹುದು ಎಂದು ಹೇಳುತ್ತದೆ.

ಅಂಟಿಸುವ ಮೂಲಕ ಸಮನ್ಸನ್ನು ಜಾರಿ ಮಾಡುವ ಸಂದರ್ಭ ಬಂದಾಗ ವಿಳಾಸವನ್ನು ಯಾರು ತೋರಿಸಿದ್ದಾರೊ ಮತ್ತು ಯಾರ ಸಮ್ಮುಖದಲ್ಲಿ ಸಮನ್ಸನ್ನು ಅಂಟಿಸಲಾಯಿತೋ ಅವರ ಹೆಸರು ಮತ್ತು ವಿಳಾಸಗಳನ್ನು ಹೊಂದಿದ ವರದಿಯನ್ನು ಮೂಲ ಸಮನ್ಸನ ಜೊತೆಗೆ ನ್ಯಾಯಾಲಯಕ್ಕೆ ವಾಪಸು ಮಾಡಬೇಕು.

2025 ರ ತಿದ್ದುಪಡಿ ಪ್ರಕಾರ ಸದರಿ ವ್ಯಕ್ತಿಗಳ ಫೋನ್ ನಂಬರ್, ಮೊಬೈಲ್ ನಂಬರ್, ಇ-ಮೇಲ್ ವಿಳಾಸವನ್ನು ಕೂಡ ನಮೂದಿಸಬೇಕು. ಕರ್ನಾಟಕ ಸಿವಿಲ್ ನಿಯಮಗಳ ನಿಯಮ 210 ರಿಂದ 212 ರಲ್ಲಿ ಸಮನ್ಸುಗಳನ್ನು ಮೇಲೆ ಹೇಳಿದ ರೀತಿಯಲ್ಲಿ ಜಾರಿಗೊಳಿಸಿದಾಗ ಹಿಂಬರಹವನ್ನು ಬರೆಯಬೇಕು ಮತ್ತು ವರದಿಯನ್ನು ಲಗತ್ತಿಸಬೇಕು ಎಂದು ಹೇಳುತ್ತದೆ. ವರದಿಯು ಎಲ್ಲಾ ಸಂಗತಿಗಳನ್ನು ಒಳಗೊಂಡಿರಬೇಕು. ನಿಯಮ 18 ಎ ಸಮನ್ಸ್ ಅನ್ನು ಜಾರಿ ಮಾಡಿದ ಸಮಯ ಮತ್ತು ರೀತಿಯ ಬಗ್ಗೆ ಹಿಂಬರಹವನ್ನು ಬರೆದು ಲಗತ್ತಿಸಬೇಕು ಎಂದು ಹೇಳುತ್ತದೆ. (ಕರ್ನಾಟಕ ತಿದ್ದುಪಡಿ)

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 5ರ ನಿಯಮ 19 ಸಮನ್ಸನ್ನು ಅಂಟಿಸುವ ಮೂಲಕ ಜಾರಿ ಮಾಡಿದ ಸಂದರ್ಭದಲ್ಲಿ ಪ್ರೊಸೆಸ್ ಸರ್ವರ್‌ನ್ನು

ವಿಚಾರಣೆ ಮಾಡಿ, ಸಮನ್ಸ್ ಸೂಕ್ತವಾಗಿ ಜಾರಿಯಾಗಿದೆ ಎಂದು ಮನವರಿಕೆ ಅದಲ್ಲಿ ಸಮನ್ಸ್ ಜಾರಿಯಾಗಿದೆ ಎಂದು ನ್ಯಾಯಾಲಯ ಪರಿಗಣೀಸಬೇಕು, ಇಲ್ಲವಾದಲ್ಲಿ ಸಮನ್ಸನ್ನು ಪುನ: ಹೊರಡಿಸಿ, ಯಾವ ರೀತಿ ಜಾರಿ ಮಾಡಬೇಕು ಎಂದು ಆದೇಶಿಸುಬೇಕು ಎಂದು ಹೇಳುತ್ತದೆ.

ನಿಯಮ 20 ಬದಲಿ ವ್ಯವಸ್ಥೆಯ ಮೂಲಕ ಸಮನ್ಸನ್ನು ಜಾರಿ ಮಾಡುವ ಬಗ್ಗೆ ಹೇಳುತ್ತದೆ. ಸಮನ್ಸನ್ನು ಮನೆ ಅಥವಾ ಕಛೇರಿಯ ಹೊರ ಭಾಗದಲ್ಲಿ ಅಂಟಿಸುವ ಮೂಲಕ ಜಾರಿ ಮಾಡಲು ಈ ನಿಯಮದಲ್ಲಿ ಅವಕಾಶ ನೀಡಿದೆ. ನ್ಯಾಯಾಲಯದ ಆದೇಶದ ಮೇರೆಗೆ, ಸಮನ್ಸನ್ನು ಅಂಟಿಸಿ ಜಾರಿ ಮಾಡುವಾಗ ನಿಯಮ 17 ರಲ್ಲಿ ಹೇಳಿದ ವಿಧಾನಗಳನ್ನು ಅನುಸರಿಸಬೇಕಾದ ಅವಶ್ಯಕತೆ ಇರುವುದಿಲ್ಲ.

**<u>ನ್ಯಾಯಾಲಯದ ವ್ಯಾಪ್ತಿ ಪ್ರದೇಶದ ಹೊರಗಡೆ ಇರುವ ಪಕ್ಷಗಾರರಿಗೆ ಸಮನ್ಸನ್ನು ಜಾರಿಮಾಡುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 28 ಮತ್ತು ಕ್ರಮಾದೇಶ 5 ರ ನಿಯಮ 21 ಮತ್ತು 22, ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಹೊರಗೆ ಮತ್ತು ಬೇರೆ ರಾಜ್ಯಗಳಲ್ಲಿ. ವಾಸಿಸುವವರಿಗೆ ಸಮನ್ಸುಗಳನ್ನು ಹೇಗೆ ಜಾರಿ ಮಾಡಬೇಕು ಎಂಬುದರ ಬಗ್ಗೆ ಹೇಳುತ್ತದೆ. ಅಂತಹ ಸಮನ್ಸ್‌ಗಳು ನ್ಯಾಯಾಲಯಕ್ಕೆ ಬಂದಾಗ ಯಾವ ವಿಧಾನಗಳನ್ನು ಅನುಸರಿಸಬೇಕು ಎಂಬುದರ ಬಗ್ಗೆ ಹೇಳುತ್ತದೆ. ಇದರ ಪ್ರಕಾರ ಅಂತಹ ಸಮನ್ಸುಗಳನ್ನು ನಮ್ಮ ನ್ಯಾಯಾಲಯ ಹೊರಡಿಸಿದ ಸಮನ್ಸುಗಳನ್ನು ಯಾವ ರೀತಿ ಜಾರಿ ಮಾಡಲಾಗುತ್ತಿದೆಯೊ ಅದೇ ರೀತಿ ಜಾರಿ ಮಾಡಿ ನಂತರ ಸದರಿ ನ್ಯಾಯಾಲಯಕ್ಕೆ ಹಿಂಬರಹದ ಜೊತೆ ವಾಪಸ್ಸು ಕಳುಹಿಸಬೇಕು ಎಂದು ಹೇಳುತ್ತದೆ.

**<u>ಬಂಧೀಖಾನೆಯಲ್ಲಿರುವ ಪಕ್ಷಗಾರರಿಗೆ ಸಮನ್ಸನ್ನು ಜಾರಿಮಾಡುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 5 ರ ಕ್ರಮಾದೇಶ 5ರ ನಿಯಮ 24, ಬಂದೀಖಾನೆಯಲ್ಲಿರುವ ಪ್ರತಿವಾದಿಗೆ ಸಮನ್ಸುಗಳನ್ನು ಜಾರಿ ಮಾಡುವ ಬಗ್ಗೆ ಹೇಳುತ್ತದೆ. ನಿಯಮ 25 ದೇಶದ ಹೊರಗೆ ವಾಸಿಸುತ್ತಿರುವ ಪ್ರತಿವಾದಿಗೆ ಸಮನ್ಸನ್ನು ಹೇಗೆ ಜಾರಿ ಮಾಡಬೇಕು ಎಂಬುದನ್ನು ಹೇಳುತ್ತವೆ. ನಿಯಮ 26 ಮತ್ತು 26ಎ.

ರಾಜತಾಂತ್ರಿಕ ಏಜೆಂಟ್ ಅಥವಾ, ಅಲ್ಲಿನ ನ್ಯಾಯಾಲಯಗಳ ಮೂಲಕ ಸಮನ್ಸ್ ನ್ನು ಜಾರಿ ಮಾಡಬಹುದು ಎಂದು ಹೇಳುತ್ತದೆ.

**<u>ಸರ್ಕಾರಿ ನೌಕರರಿಗೆ ಸಮನ್ಸನ್ನು ಜಾರಿಮಾಡುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 5 ರ ಕ್ರಮಾದೇಶ 5ರ ನಿಯಮ 27 ಸಾರ್ವಜನಿಕ ಅಧಿಕಾರಿಗೆ, ರೈಲ್ವೆ ಇಲಾಖೆ ಸಿಬ್ಬಂದಿಗೆ ಸ್ಥಳೀಯ ಪ್ರಾಧಿಕಾರಿಗಳಿಗೆ ಸಮನ್ಸುಗಳನ್ನು ಹೇಗೆ ಜಾರಿ ಮಾಡಬೇಕು ಎಂಬುದನ್ನು ಹೇಳುತ್ತದೆ. ನಿಯಮ 28 ಸೈನಿಕರಿಗೆ, ನಾವಿಕರಿಗೆ ಮತ್ತು ವೈಮಾನಿಕರಿಗೆ ಸಮನ್ಸ್ ನ್ನು ಹೇಗೆ ಜಾರಿ ಮಾಡಬಹುದು ಎಂಬುದಾಗಿ ಹೇಳುತ್ತದೆ.

**<u>ರಜಾಕಾಲೀನ ಅವಧಿಯಲ್ಲಿ ವಾರೆಂಟ್ ಜಾರಿಗೊಳಿಸುವಿಕೆಗೆ ನಿರ್ಭಂದ:</u>**

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 213 ಸಿವಿಲ್ ನ್ಯಾಯಾಲಯಗಳ ರಜಾ ಅವಧಿಗಳಲ್ಲಿ ವಾರಂಟಗಳನ್ನು ಕಾರ್ಯಗತ ಗೊಳಿಸುವುದನ್ನು ನಿರ್ಬಂಧಿಸಿದ್ದು, ರಜಾಕಾಲೀನ ನ್ಯಾಯಾಲಯ ಅದೇಶಿಸಿದಲ್ಲಿ ಮಾತ್ರ ವಾರಂಟನ್ನು ಕಾರ್ಯಗತ ಗೊಳಿಸ ಬಹುದು ಎಂದು ಹೇಳುತ್ತದೆ. ನಿಯವ 214 ಪ್ರೊಸೆಸನ್ನು ಪ್ರೊಸಸ್ ಸರ್ವರ್ ಮೂಲಕ ಜಾರಿಗೊಳಿಸಬೇಕು ಮತ್ತು ವಾರಂಟಗಳನ್ನು ಭೇಲೀಪರ ಮಾಲಕ ಕಾರ್ಯಗತಗೊಳಿಸಬೇಕು ಎಂದು ಹೇಳುತ್ತದೆ.

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 214 ಸರ್ವೋಚ್ಚ ನ್ಯಾಯಾಲಯದಿಂದ ಸಮನ್ಸಗಳು ಬಂದಾಗ ಅವುಗಳನ್ನು ಜಾರಿಗೊಳಿಸಿದ ಬಗ್ಗೆ ಇರುವ ಹಿಂಬರಹವನ್ನು ಆಂಗ್ಲ ಭಾಷೆಗೆ ತರ್ಜುಮೆ ಮಾಡಿ ನೀಡಬೇಕು ಎಂದು ಹೇಳುತ್ತದೆ. ಸಮನ್ಸ್ ಜಾರಿಯಾಗದೆ ಇದ್ದಲ್ಲಿ ಅದಕ್ಕೆ ಕಾರಣವನ್ನು ಸ್ಪಷ್ಟವಾಗಿ ನಮೊದಿಸಿ ಸಮನ್ಸನ್ನು ಹಿಂತಿರುಗಿಸಬೇಕು ಎಂದು ಹೇಳುತ್ತದೆ.

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 223 ಕೆಲವೊಂದು ಸಂದರ್ಭದಲ್ಲಿ ತುರ್ತು ಪ್ರೊಸಸ್ ಜಾರಿಮಾಡಲು ಪ್ರೊಸಸ್ ಸರ್ವರ್‌ರಿಗೆ ಆದೇಶಿಸುವ ಆಧಿಕಾರದ ಬಗ್ಗೆ ಹೇಳುತ್ತದೆ. ಹಾಗೆ ಆದೇಶ ಮಾಡಿದಾಗ ಅದನ್ನು ಶೀಘ್ರವಾಗಿ

ಜಾರಿಮಾಡಲು ಕಳುಹಿಸಿ ಕೊಡುವುದು ಪ್ರೋಸಸ್ ನಾಜೀರನ ಕರ್ತವ್ಯ ಎಂದು ಹೇಳುತ್ತದೆ.

**<u>ವಿಶೇಷ ಪ್ರೋಸಸ್ ಸರ್ವರ್ ನೇಮಕಾತಿಯ ವಿಧಾನ:</u>**

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 224 ನ್ಯಾಯಾಲಯದ ಕಾರ್ಯ ವ್ಯಾಪ್ತಿ ಪ್ರದೇಶದ ಹೊರಗಡೆ ಇರುವ ವ್ಯಕ್ತಿಗಳಿಗೆ ಸಮನ್ಸನ್ನು ಜಾರಿಗೊಳಿಸಲು ಪ್ರೊಸಸ್ ಸರ್ವರಿಗೆ ಅದೇಶಿಸುವ ಅಧಿಕಾರದ ಬಗ್ಗೆ ಹೇಳುತ್ತದೆ. ಹಾಗೇ ಸಮನ್ಸನ್ನು ಹೊರಡಿಸಿದಾಗ ಭತ್ಯೆಯ ಜೊತೆ ಸದರಿ ವಿಳಾಸಗೆ ಹೋಗಿ ಬರಲು ಬೇಕಾದ ಖರ್ಚನ್ನು ಪಕ್ಷಗಾರರು ನೀಡಬೇಕು ಎಂದು ಹೇಳುತ್ತದೆ.

ಮೇಲೆ ಹೇಳಿದ ವಿಧಿ ವಿಧಾನಗಳನ್ನು ಅರ್ಜಿಗಳಲ್ಲಿ ಹೊರಡಿಸಿದ ನೋಟೀಸುಗಳನ್ನು ಜಾರಿಗೊಳಿಸುವಾಗ ಅನುಸರಿಸತಕ್ಕದ್ದು.

---

## <u>ವಿಷಯ ಸೂಚಿ - 2</u>

## ಸಾಕ್ಷಿದಾರರಿಗೆ ಸಾಕ್ಷಿ ಸಮನ್ಸನ್ನು ಜಾರಿಗೊಳಿಸುವ ಮತ್ತು ವಾರೆಂಟನ್ನು ಕಾರ್ಯಗತಗೊಳಿಸುವ ವಿಧಾನ

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲ 31 ಮತ್ತು 32. ಹಾಗೂ ಕ್ರಮಾದೇಶ 16 ಸಾಕ್ಷಿದಾರರಿಗೆ ಸಮನ್ಸನ್ನು ಜಾರಿಗೊಳಿಸುವ ವಿಧಾನ ಮತ್ತು ಸಾಕ್ಷಿದಾರ ನ್ಯಾಯಾಲಯಕ್ಕೆ ಹಾಜರಾಗದಿದ್ದಲ್ಲಿ ಅಥವಾ ಹಾಜರುಪಡಿಸಲು ಆದೇಶಿಸಿದ ದಾಖಲೆಗಳನ್ನು ಹಾಜರುಪಡಿಸದೇ ಇದ್ದಲ್ಲಿ, ವಾರೆಂಟನ್ನು ನೀಡುವ ಅಧಿಕಾರ ಮತ್ತು ಅದನ್ನು ಕಾರ್ಯಗತಗೊಳಿಸುವ ಬಗ್ಗೆ ಹೇಳುತ್ತದೆ.

**<u>ಸಾಕ್ಷಿದಾರರಿಗೆ ಸಾಕ್ಷಿ ಸಮನ್ಸನ್ನು ಜಾರಿ ಮಾಡುವ ವಿಧಾನ</u>.**

ಪ್ರತಿವಾದಿಗೆ ಸಮನ್ಸನ್ನು ಹೇಗೆ ಜಾರಿ ಅದೇ ವಿಧಾನದ ಮೂಲಕ ಸಾಕ್ಷಿದಾರರಿಗೆ ಕೂಡ ದಾಖಲೆಯನ್ನು ಹಾಜರುಪಡಿಸಲು ಅಥವಾ ಸಾಕ್ಷಿ ನೀಡಲು ಹೊರಡಿಸಲಾದ ಸಮನ್ಸನ್ನು ಜಾರಿ ಮಾಡಬೇಕು ಎಂದು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 31 ಮತ್ತು ಕ್ರಮಾದೇಶ 16ರ ನಿಯಮ 8 ರಲ್ಲಿ ಸಾಕ್ಷಿ ಸಮನ್ಸನ್ನು ಜಾರಿ ಮಾಡಬೇಕು ಎಂದು ಹೇಳುತ್ತದೆ. ಸಾಕ್ಷಿಗೆ ನೀಡಿದ ಸಮನ್ಸನ್ನು ಸಾಕಷ್ಟು ಸಮಯಾವಕಾಶ ನೀಡಿ ಜಾರಿ ಮಾಡಬೇಕು ಎಂದು ನಿಯಮ 9 ಹೇಳುತ್ತದೆ. ಸಾಕ್ಷಿ ನೀಡಲು ನ್ಯಾಯಾಲಯಕ್ಕೆ ಬರಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಬೇಕಾಗುವ ಸಮಯವನ್ನು ನೀಡಬೇಕು ಎಂದು ಹೇಳುತ್ತದೆ.

**<u>ಸಾಕ್ಷಿ ಸಮನ್ಸನ್ನು ಸ್ವೀಕರಿಸಿದ ಸಾಕ್ಷಿಯ ಕರ್ತವ್ಯ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 5 ರ ಕ್ರಮಾದೇಶ 16 ನಿಯಮ 1(2) ಅರ್ಜಿಯನ್ನು ಸಲ್ಲಿಸುವ ಮೂಲಕ ಪಕ್ಷಗಾರ ಸಾಕ್ಷಿದಾರರಿಗೆ ಸಾಕ್ಷಿಯನ್ನು ನುಡಿಯಲು ಇಲ್ಲ ದಾಖಲೆಯನ್ನು ಹಾಜರುಪಡಿಸಲು ಸಮನ್ಸ್ ನ್ನು ನೀಡುವಂತೆ ಕೇಳಿಕೊಳ್ಳಬಹುದು ಎಂದು ಹೇಳುತ್ತದೆ. ನಿಯಮ 5 ರಲ್ಲಿ, ಸಾಕ್ಷಿಯು ಎಲ್ಲಿ ಹಾಜರಾಗಬೇಕು ಎಷ್ಟು ಹೊತ್ತಿಗೆ ಹಾಜರಾಗಬೇಕು ಮತ್ತು ಉದ್ದೇಶವನ್ನು ಸಮನ್ಸ್ ನಲ್ಲಿ ನಮೂದಿಸಬೇಕು ಎಂದು ಹೇಳಿದೆ. ನಿಯಮ 6 ರ ಪ್ರಕಾರ, ಸಮನ್ಸ್ ದಾಖಲೆಯನ್ನು ಹಾಜರುಪಡಿಸಲು ಮಾತ್ರ ಆಗಿದ್ದಲ್ಲಿ ನಿಗದಿಪಡಿಸಿದ ದಿನದಂದು

ದಾಖಲೆಯನ್ನು ಖುದ್ದಾಗಿ ಇಲ್ಲ ಇತರರ ಮೂಲಕ ಹಾಜರುಪಡಿಸಿದರೆ ಸಾಕು ಎಂದು ಹೇಳುತ್ತದೆ.

**<u>ಸಾಕ್ಷಿದಾರ ಸಮನ್ಸಿನ ಪ್ರಕಾರ ನಡೆದು ಕೊಳ್ಳಲು ವಿಫಲನಾದಲ್ಲಿ ಕೈಗೊಳ್ಳಬಹುದಾದ ಕ್ರಮಗಳು:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯಕಲಂ 32 ಮತ್ತು ಕ್ರಮಾದೇಶ 16ರ ನಿಯಮ 10 ಸಾಕ್ಷಿದಾರ ಸಮನ್ಸಿನ ಪ್ರಕಾರ ನಡೆದುಕೊಳ್ಳಲು ತಪ್ಪಿದ್ದಲ್ಲಿ ನ್ಯಾಯಾಲಯ ಯಾವೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ಹೇಳಿದೆ. ಇದರ ಪ್ರಕಾರ ನ್ಯಾಯಾಲಯ ಮೊದಲು ಸಮನ್ಸ್ ಸಾಕ್ಷಿದಾರರಿಗೆ ಜಾರಿಯಾಗಿದೆಯೇ ಎಂಬುದನ್ನು ಖಚಿತಪಡಿಸಿ ಕೊಳ್ಳಬೇಕು. ಸಾಕ್ಷಿಗೆ ಸಮನ್ಸ್ ಸರಿಯಾದ ರೀತಿಯಲ್ಲಿ ಜಾರಿಯಾಗಿದ್ದರು, ಕೂಡ ನ್ಯಾಯಾಲಯಕ್ಕೆ ಹಾಜರಾಗದೇ ಇದ್ದಲ್ಲಿ ಅಥವಾ ದಾಖಲೆಯನ್ನು ಹಾಜರುಪಡಿಸದೇ ಇದ್ದಲ್ಲಿ. ಈ ಸಂಬಂಧ ನ್ಯಾಯಾಲಯ ಉದ್ಘೋಷಣೆ ಹೊರಡಿಸಬಹುದು. ಹಾಗೆಯೇ ಹೊರಡಿಸಲಾದ ಉದ್ಘೋಷಣೆಯ ಪ್ರತಿಯನ್ನು ಆತ ವಾಸಿಸುವ ಮನೆಯ ಹೊರಬಾಗಿಲು ಅಥವಾ ಎದ್ದು ಕಾಣುವ ಮನೆಯ ಇತರ ಭಾಗದಲ್ಲಿ ಅಂಟಿಸಬೇಕು ಎಂದು ಹೇಳುತ್ತದೆ.

ಉದ್ಘೋಷಣೆಯ ಬದಲಾಗಿ, ಅಥವಾ ಉದ್ಘೋಷಣೆಯ ಜೊತೆಗೆ, ನ್ಯಾಯಾಲಯ ಆ ಸಮಯದಲ್ಲಿ ಅಥವಾ ಆನಂತರ ಸದರಿ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಜಾಮೀನು ಸಹಿತ ವಾರೆಂಟನ್ನು ಅಥವಾ ಜಾಮೀನು ರಹಿತವಾದ ವಾರೆಂಟನ್ನು ಹೊರಡಿಸಬಹುದು ಮತ್ತು ಜುಲ್ಮಾನೆಯನ್ನು ವಿಧಿಸಬಹುದು. ಇಲ್ಲಿ ಆಸ್ತಿಯನ್ನು ಜಪ್ತಿ ಮಾಡಲು ಆದೇಶಿಸುವ ಅಧಿಕಾರ ಕೂಡ ನ್ಯಾಯಾಲಯಕ್ಕೆ ಇದೆ. ನಿಯಮ 11 ರ ಪ್ರಕಾರ ಸಾಕ್ಷಿದಾರ ಹಾಜರಾಗಿ, ಸಮನ್ಸನ್ನು ಉದ್ದೇಶ ಪೂರ್ವಕ ತಿರಸ್ಕರಿಸಿಲ್ಲ ಎಂದು ಮನವರಿಕೆ ಮಾಡಿದಲ್ಲಿ ಜಪ್ತಿಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ನೀಡಿದೆ.

ಕ್ರಮಾದೇಶ 21ರ ನಿಯಮ 12 ಸಾಕ್ಷಿದಾರರಿಗೆ ರೂಪಾಯಿ 500 ಕ್ಕೆ ಮೀರದಂತೆ ಜುಲ್ಮಾನೇ ವಿಧಿಸುವ ಮತ್ತು ಸ್ವತ್ತನ್ನು ಅಥವಾ ಜಾಗವನ್ನು ಜಪ್ತಿ ಮಾಡಿ ಮಾರಾಟ ಮಾಡುವ ಅಧಿಕಾರವನ್ನು ನ್ಯಾಯಾಲಯಕ್ಕೆ ನೀಡಿದೆ. ಡಿಕ್ರಿಯ ಅಮಲ್ಜಾರಿ ನಡವಳಿಕೆಯಲ್ಲಿ ಸ್ವತ್ತನ್ನು ಜಪ್ತಿ ಮಾಡಿ ಮಾರಾಟ ಮಾಡುವ

ವಿಧಾನವನ್ನು ಅನುಸರಿಸಿ ಜಪ್ತಿ ಮತ್ತು ಮಾರಾಟವನ್ನು ಮಾಡಬೇಕು ಎಂದು ಕ್ರಮಾದೇಶ 21ರ ನಿಯಮ 13 ಹೇಳುತ್ತದೆ.

ದಸ್ತಗಿರಿ ಮಾಡಲಾದ ಸಾಕ್ಷಿದಾರನು ಸಾಕ್ಷ್ಯವನ್ನು ಕೊಡಲು ಮತ್ತು ದಸ್ತಾವೇಜನ್ನು ಹಾಜರುಪಡಿಸಲು ಸಾಧ್ಯವಿಲ್ಲದೇ ಇರುವಾಗ ನ್ಯಾಯಾಲಯಕ್ಕೆ ಸೂಕ್ತ ಎನಿಸಿದ ರೀತಿಯಲ್ಲಿ ಆತನಿಂದ ಭದ್ರತೆಯನ್ನು ಪಡೆದುಕೊಂಡು ಬಿಡಬಹುದು ಇಲ್ಲ ಸಿವಿಲ್ ಬಂಧಿಖಾನೆಯಲ್ಲಿ ಇಡಬಹುದು ಎಂದು ನಿಯಮ 18 ಹೇಳುತ್ತದೆ.

ಕ್ರಮಾದೇಶ 21ರ ನಿಯಮ 16ಎ. ಬಂದೀಖಾನೆಯಲ್ಲಿರುವ ವ್ಯಕ್ತಿಗಳನ್ನು ಸಾಕ್ಷಿ ನೀಡಲು ಕರೆಯಿಸಿಕೊಳ್ಳುವಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಹೇಳುತ್ತದೆ.

*****

## ವಿಷಯ ಸೂಚಿ: 3

### ನೊಟೀಸನ್ನು ಮತ್ತು ದಸ್ತಗಿರಿ ವಾರೆಂಟನ್ನು ಜಾರಿಗೊಳಿಸುವ ವಿಧಾನ:-

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 51 ಅಮಲ್ಜಾರಿಯನ್ನು ಯಾವ ವಿಧಾನಗಳ ಮೂಲಕ ಕಾರ್ಯಗತಗೊಳಿಸಬಹುದು ಎಂಬುದರ ಬಗ್ಗೆ ಹೇಳುತ್ತದೆ. ಇದರ ಪ್ರಕಾರ, ನಿರ್ದಿಷ್ಟ ಸ್ವತ್ತನ್ನು ಸ್ವಾಧೀನಕ್ಕೆ ನೀಡಬೇಕು ಎಂದು ಡಿಕ್ರಿ ಇದ್ದರೆ ಸದರಿ ಆಸ್ತಿಯನ್ನು ಡಿಕ್ರಿದಾರನ ಸ್ವಾಧೀನಕ್ಕೆ ಕೊಡಬೇಕು. ಸ್ವತ್ತಿನ ಜಪ್ತಿಯ ಮೂಲಕ ಮತ್ತು ಮಾರಾಟ ಮಾಡುವ ಮೂಲಕ ದಸ್ತಗಿರಿ ಮಾಡಿ ಬಂಧನದಲ್ಲಿ ಇಡುವ ಮೂಲಕ, ರಿಸೀವರನ್ನು ನೇಮಿಸುವ ಮೂಲಕ,ಸಂಬಳವನ್ನು ಕಟಾವು ಮಾಡುವ ವಿಧಾನದ ಮೂಲಕ, ಗಾರ್ನಿಷಿಯ ಬಳಿ ತೀರ್ಪುಋಣಿಗೆ ಸೇರಿದ ಹಣ ಮತ್ತು ಸ್ವತ್ತನ್ನು ಜಪ್ತಿಮಾಡುವ ಮೂಲಕ ಡಿಕ್ರಿಯನ್ನು ಅಮಲ್ಜಾರಿ ಮಾಡ ಬಹುದು.

### <u>ಡಿಕ್ರಿಯನ್ನು ಇನ್ನೊಂದು ನ್ಯಾಯಾಲುಕ್ಕೆ ಅಮಲ್ಜಾರಿಗಾಗಿ ವರ್ಗಾಯಿಸುವ ಸಂದರ್ಭ</u>

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 39 ಡಿಕ್ರಿಯನ್ನು ಯಾವ ಸಂಧರ್ಭಗಳಲ್ಲಿ ಇನ್ನೊಂದು ನ್ಯಾಯಲಯಕ್ಕ ಅಮಲ್ಜಾರಿಗಾಗಿ ವರ್ಗಾವಣೆ ಮಾಡ ಬಹುದು ಎಂಬುದನ್ನು ಹೇಳುತ್ತದೆ. ಕಲಂ 39(4) ರಲ್ಲಿ ನ್ಯಾಯಲಯದ ಅಧಿಕಾರ ವ್ಯಾಪ್ತಿಯ ಹೊರಗೆ ಇರುವ ತೀರ್ಪುಋಣಿ ಮತ್ತು ಆತನ ಆಸ್ತಿಯ ವಿರುದ್ಧ ಡಿಕ್ರಿಯನ್ನು ಹೊರಡಿಸಿದ ನ್ಯಾಯಲಯಕ್ಕೆ ಸದರಿ ಡಿಕ್ರಿಯನ್ನು ಅಮಲ್ಜಾರಿ ಮಾಡುವ ಅಧಿಕಾರ ಇಲ್ಲ ಎಂದು ಹೇಳುತ್ತದೆ. ಇದರ ಪ್ರಕಾರ ಅಂತಹ ಡಿಕ್ರಿಯನ್ನು ಕಾರ್ಯಾವ್ಯಾಪ್ತಿಯಿರುವ ನ್ಯಾ ಲಯಕ್ಕೆ ಅಮಲ್ಜಾರಿಗಾಗಿ ಕಳುಹಿಸಬೇಕು.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 50 ತೀರ್ಪುಋಣಿಯ ವಾರಸುದಾರರ ವಿರುದ್ಧ ಡಿಕ್ರಿಯನ್ನು ಅಮಲ್ಜಾರಿ ಮಾಡುವ ಬಗ್ಗೆ ಹೇಳುತ್ತದೆ. ತೀರ್ಪುಋಣಿಯಿಂದ ಬಂದ ಆಸ್ತಿಗೆ ಅನುಗುಣವಾಗುವಷ್ಟರ ಮಟ್ಟಿಗೆ ಮತ್ರ ಜವಾಬ್ದಾರಿ ಎಂದು ಹೇಳುತ್ತದೆ.

**<u>ದಸ್ತಗಿರಿ ಮತ್ತು ಬಂಧನವನ್ನು ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳು:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 55 ದಸ್ತಗಿರಿ ಮತ್ತು ಬಂಧನದಲ್ಲಿ ಇಡುವಂತೆ ಯಾವೆಲ್ಲಾ ಸಂದರ್ಭಗಳ್ಲಲಿ ಆದೇಶಿಸಬಹುದು ಎಂಬುದನ್ನು ಹೇಳುತ್ತದೆ. ದಸ್ತಗಿರಿ ಮಾಡಲು ಮನೆಯ ಒಳಗಡೆ ಸೂರ್ಯೋದಯಕ್ಕಿಂತ ಮೊದಲು ಮತ್ತು ಸೂರ್ಯಾಸ್ತದ ನಂತರ ಮನೆಯ ಒಳಗಡೆ ಪ್ರವೇಶಿಸುವುದನ್ನು ನಿಷೇಧಿಸುತ್ತದೆ. ಆದರೆ ತೀರ್ಪು ಋಣಿಯನ್ನು ಮನೆಯ ಹೊರಗಡೆಇಲ್ಲ ಇನ್ನಿತರ ಜಾಗದಲ್ಲಿ ದಸ್ತಗಿರಿ ಮಾಡುವುದಕ್ಕೆ ಕಾನೂನಿನ ತೊಡಕಿರುವುದಿಲ್ಲ. ಯಾವುದೇ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಸೂರ್ಯಾಸ್ತದ ನಂತರ ಅಥವಾ ಸೂರ್ಯೋದಯಕ್ಕೆ ಮೊದಲು ಯಾವುದೇ ವಾಸಗೃಹವನ್ನು ಪ್ರವೇಶಿಸತಕ್ಕದ್ದಲ್ಲ. ತೀರ್ಪುಋಣಿ ಇರುವಂತಹ ಮನೆಯ ಪ್ರವೇಶಕ್ಕೆ ಪ್ರತಿ ರೋದ ವ್ಯಕ್ತಪಡಿಸಿದ ಹೊರತು, ಮನೆಯ ಬಾಗಿಲನ್ನು ಒಡೆದು ತೆರೆಯ ತಕ್ಕದಲ್ಲ. ಮಹಿಳೆ ಮನೆಯೊಳಗೆ ಇದ್ದಲ್ಲಿ. ಆಕೆಗೆ ಹೊರಗೆ ಹೋಗಲು ಸೂಕ್ತ ಅವಕಾಶ ನೀಡಬೇಕು.

ಅಮಲ್ಜಾರಿ ಡಿಕ್ರಿಹಣ ಸಂದಾಯಕ್ಕೆ ಸಂಬಂಧಿಸಿದ್ದಲ್ಲಿ ತೀರ್ಪುಋಣಿ ಹಣ ಮತ್ತು ಖರ್ಚನ್ನು ಕೊಟ್ಟಲ್ಲಿ, ಆತನನ್ನು ದಸ್ತಗಿರಿ ಮಾಡಲು ಅವಕಾಶ ಇಲ್ಲ. ಅಮಲ್ಜಾರಿ ಅರ್ಜಿ ಹಣ ವಸೂಲಾತಿ ಡಿಕ್ರಿಗೆ ಸಂಬಂಧಿಸಿದ್ದಾಗಿದ್ದಲ್ಲಿ ಮಹಿಳೆಯ ದಸ್ತಗಿರಿ ಮತ್ತು ಬಂಧನಕ್ಕೆ ಆದೇಶಿಸಭಾರದು ಎಂದು ಕಲಂ 56 ಹೇಳುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 57 ಜೀವನ ನಿರ್ವಹಣಾ ಭತ್ಯೆಯನ್ನು ಕಟ್ಟುವ ಬಗ್ಗೆ ಹೇಳುತ್ತದೆ. ಕಲಂ 58 ರಲ್ಲಿ ದಸ್ತಗಿರಿ ಮಾಡಿ ಬಂಧನದಲ್ಲಿ ಇಟ್ಟ ತೀರ್ಪುಋಣಿಯನ್ನು ಯಾವ ಸಂದರ್ಭಗಳಲ್ಲಿ ಬಿಡುಗಡೆ ಮಾಡಬಹುದು ಎಂಬುದರ ಬಗ್ಗೆ ಹೇಳುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 59 ತೀರ್ಪುಋಣಿ ಕಾಯಿಲೆಯಿಂದ ಬಳಲುತ್ತಿದ್ದಾನೆ ಎಂದಾಗ ಆತನನ್ನು ಬಿಡುಗಡೆ ಮಾಡಬಹುದು ಎಂದು ಹೇಳುತ್ತದೆ.

**<u>ಅಮಲ್ಜಾರಿ ಅರ್ಜಿಯಲ್ಲಿ ನೋಟೀಸನ್ನು ನೀಡುವ ಬಗ್ಗೆ:</u>**

ಅಮಲ್ಜಾರಿ ಅರ್ಜಿಯಲ್ಲಿ, ನೋಟೀಸನ್ನು ನೀಡಲೇಬೇಕೆಂಬ ನಿಯಮ ಇಲ್ಲ. ಅಮಲ್ಜಾರಿ ಅರ್ಜಿಯನ್ನು ಡಿಕ್ರಿಯಾದ ಎರಡು ವರ್ಷಗಳ ತರುವಾಯ ಮತ್ತು ಇತರ ಕೆಲವು ಸಂದರ್ಭಗಳಲ್ಲಿ ಸಲ್ಲಿಸಿದ್ದಲ್ಲಿ ನೋಟೀಸನ್ನು ತೀರ್ಪಋಣಿಗೆ ನೀಡಬೇಕು

ಎಂದು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 22 ರಲ್ಲಿ ಹೇಳಿದೆ. ಅಮಲ್ಜಾರಿ ಅರ್ಜಿಯಲ್ಲಿ ದಸ್ತಗಿರಿ ಮಾಡುವಂತೆ ಕೇಳಿಕೊಂಡರೆ, ಅದಕ್ಕೆ ಕಾರಣಗಳನ್ನು ತಿಳಿಸಬೇಕು ಎಂದು ನಿಯಮ 11 ಹೇಳುತ್ತದೆ. ಕ್ರಮಾದೇಶ 21 ನಿಯಮ 37 ತೀರ್ಪುಋಣಿಗೆ ನೋಟೀಸನ್ನು ನೀಡುವ ಬಗ್ಗೆ ಹೇಳುತ್ತದೆ. ನೋಟೀಸನ್ನು ಅಪೆಂಡಿಕ್ಸ್ 'ಇ' ಯ ನಮೂನೆ 11 ರಂತೆ ನೀಡಬೇಕು.

ನೋಟೀಸನ್ನು ನೀಡಿದ ನಂತರ ನಡೆಸಬೇಕಾದ ಪ್ರಕ್ರಿಯೆ ಬಗ್ಗೆಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 23 ರಲ್ಲಿ ಹೇಳಿ . ನೋಟೀಸನ್ನು ನೀಡಿದ ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಲಯಕ್ಕೆ ಮನದಟ್ಟಾಗುವ ಕಾರಣವನ್ನು ತೋರಿಸದೇ ಇದ್ದಲ್ಲಿ. ಡಿಕ್ರಿಯನ್ನು ಅಮಲ್ಜಾರಿ ಮಾಡುವ ನ್ಯಾಯಾಲಯ ಕ್ರಮ ಕೈಗೊಳ್ಳಬೇಕಾಗುತ್ತದೆ. ಡಿಕ್ರಿ ಅಮಲ್ಜಾರಿಯ ಬಗ್ಗೆ ಆಕ್ಷೇಪಣೆ ಎತ್ತಿದಲ್ಲಿ, ಅದರ ಬಗ್ಗೆ ವಿಚಾರಣೆ ಮಾಡಿ ಅಗತ್ಯ ಆದೇಶವನ್ನು ಮಾಡಬೇಕು.

**<u>ಅಮಲ್ಜಾರಿ ಪ್ರೋಸೆಸ್ ಗಳನ್ನು ಜಾರಿಗೊಳಿಸುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ನಿಯಮ 24 ಅಮಲ್ಜಾರಿಯ ಬಗ್ಗೆ ಪ್ರೊಸೆಸನ್ನು ಹೊರಡಿಸುವ ವಿಧಾನಗಳ ಬಗ್ಗೆ ಹೇಳುತ್ತದೆ. ಸದರಿ ಪ್ರೊಸೆಸ್‌ನಲ್ಲಿ ದಿನಾಂಕವನ್ನು ನಮೂದಿಸಬೇಕು. ಅದಕ್ಕೆ ನ್ಯಾಯಾಲಯ ಅಥವಾ, ಅವರಿಂದ ಅಧಿಕಾರವನ್ನು ಹೊಂದಿದ ಅಧಿಕಾರಿಯ ಸಹಿಯನ್ನು ಮಾಡಬೇಕು ಹಾಗೂ ಯಾವ ದಿನಾಂಕದೊಳಗೆ ಪ್ರೊಸೆಸನ್ನು ಕಾರ್ಯಗತಗೊಳಿಸಬೇಕು ಮತ್ತು ಯಾವ ದಿನಾಂಕದಂದು ನ್ಯಾಯಾಲಯಕ್ಕೆ ವಾಪಸ್ಸ್ ಮಾಡಬೇಕು ಎಂದು ನಮೂದಿಸಬೇಕು.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21ರ ನಿಯಮ 25 ಪ್ರೊಸೆಸನ್ನು ಹೇಳಿದ ದಿನಾಂಕದ ಒಳಗೆ ಕಾರ್ಯಗತಗೊಳಿಸಬೇಕು, ಕಾರ್ಯಗತಗೊಳಿಸದೇ ಇದ್ದಲ್ಲಿ, ಯಾವ ಕಾರಣಕ್ಕಾಗಿ ಕಾರ್ಯಗತಗೊಳಿಸಲು ಆಗಿಲ್ಲ ಎಂಬುದನ್ನು ಬರವಣಿಗೆ ಮೂಲಕ ತಿಳಿಸಬೇಕು ಎಂದು ಹೇಳುತ್ತದೆ. ಅಗತ್ಯ ಇದ್ದಲ್ಲಿ ಬೇಲಿಫ್ ಗಳನ್ನು ವಿಚಾರಣೆ ಮಾಡುವ ಅಧಿಕಾರ ಕೂಡ ನ್ಯಾಯಾಲಯಕ್ಕೆ ಇದೆ.

**<u>ದಸ್ತಗಿರಿ ವಾರೆಂಟನ್ನು ಹೊರಡಿಸುವ ಮತ್ತು ಬಂಧಿಸುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21ರ ನಿಯಮ 38 ದಸ್ತಗಿರಿ ವಾರೆಂಟನ್ನು ಹೊರಡಿಸುವ ಬಗ್ಗೆ ಹೇಳುತ್ತದೆ. ವಾರೆಂಟ್‌ನಲ್ಲಿ ಹೇಳಿದ ಡಿಕ್ರಿಯ ಮೊತ್ತವನ್ನು ಕೊಡದೇ ಇದ್ದಲ್ಲಿ ತೀರ್ಪುಋಣಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಸಮ್ಮುಖದಲ್ಲಿ ಹಾಜರುಪಡಿಸುವಂತೆ, ನ್ಯಾಯಾಲಯ ಆದೇಶಿಸಬಹುದು. ಅಪೆಂಡಿಕ್ಸ್ 'ಇ' ಯ ನಮೂನೆ 12 ರಂತೆ ವಾರೆಂಟನ್ನು ಕಳುಹಿಸಬೇಕು. ಕ್ರಮಾದೇಶ 21ರ ನಿಯಮ 39ರಲ್ಲಿ ತೀರ್ಪುಋಣಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಕರೆದು ತರುವ ತನಕದ ಜೀವನ ನಿರ್ವಹಣಾ ಮೊತ್ತವನ್ನು ಡಿಕ್ರಿದಾರ ಸಂದಾಯ ಮಾಡಬೇಕು. ಜೀವನ ನಿರ್ವಹಣಾ ಮೊತ್ತವನ್ನು ನ್ಯಾಯಾಲಯ ನಿರ್ಧರಿಸಬೇಕಾಗುತ್ತದೆ. ಹಾಗೆ ನ್ಯಾಯಾಲಯ ತೀರ್ಪುಋಣಿಯನ್ನು ಸಿವಿಲ್ ಬಂದೀಖಾನೆಯಲ್ಲಿ ಇಡುವಂತೆ ಆದೇಶಿಸಿದ್ದಲ್ಲಿ, ಜೀವನ ನಿರ್ವಹಣೆ ಖರ್ಚಿನ ಬಾಬ್ತನ್ನು ಡಿಕ್ರಿದಾರ ನ್ಯಾಯಾಲಯಕ್ಕೆ ಅಥವಾ ಬಂಧಿಖಾನೆಯ ಅಧಿಕಾರಿಗೆ ಕಟ್ಟಬೇಕು ಎಂದು ಹೇಳುತ್ತದೆ. ಅಪೆಂಡಿಕ್ಸ್ 'ಇ' ಯ ನಮೂನೆ 14 ರಂತೆ ವಾರೆಂಟಿನ ಜೊತೆ ತೀರ್ಪುಋಣಿಯನ್ನು ಬಂಧಿಖಾನೆಗೆ ಕಳುಹಿಸಬೇಕು.

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 110 ರಿಂದ 113. ದಸ್ತಗಿರಿ ಮಾಡುವ ಮತ್ತು ಬಂಧಿಖಾನೆಗೆ ಕಳುಹಿಸುವಾಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹೇಳುತ್ತದೆ. ಜೀವನ ನಿರ್ವಹಣಾ ಭತ್ಯೆಯ ವಿವರಗಳನ್ನು ನಿಯಮ 112 ರಲ್ಲಿ ಹೇಳಿದೆ. ಡಿಕ್ರಿದಾರ ತೀರ್ಪುಋಣಿಯನ್ನು ಕರೆದುಕೊಂಡು ಬರಲು ತಗಲುವ ಖರ್ಚನ್ನು ಡಿಕ್ರಿದಾರ ಭರಿಸಬೇಕು ಎಂದು ಹೇಳುತ್ತದೆ. ಬಂದೀಖಾನೆ ನ್ಯಾಯಲಯದ ವ್ಯಾಪ್ತಿಯ ಹೊರಗಡೆ ಇದ್ದಲ್ಲಿ ತೀರ್ಪುಋಣಿಯನ್ನು ಕರೆದುಕೊಂಡು ಹೋಗಲು ಬೇಕಾದ ವೆಚ್ಚವನ್ನು ಡಿಕ್ರಿದಾರ ಭರಿಸಬೇಕು. ಬಂಧಿಖಾನೆಯಿಂದ ಬಿಡಿಸುವಂತೆ ಆದೇಶಿಸಿದ ಪಕ್ಷದಲ್ಲಿ ಅಪೆಂಡಿಕ್ಸ್ 'ಇ' ಯ ನಮೂನೆ 15 ರಂತೆ ಬಂಧಿಖಾನೆಗೆ ತಿಳಿಸಬೇಕು.

ಸರ್ಕಾರಿ ನೌಕರನನ್ನು ದಸ್ತಗಿರಿ ಮಾಡಲು ಆದೇಶಿಸುವುದಕ್ಕಿಂತ 7 ದಿನಗಳ ಮೊದಲು ದಸ್ತಗಿರಿ ಮಾಡಬೇಕಾದ ವ್ಯಕ್ತಿಯ ಹಿರಿಯ ಅಧಿಕಾರಿಗೆ ನೋಟೀಸನ್ನು

ನೀಡಬೇಕು ಎಂದು ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 110 ಹೇಳುತ್ತದೆ.

ದಸ್ತಗಿರಿ ವಾರೆಂಟನ್ನು ಜಾರಿಗೊಳಿಸದೆ ವಾಪಸು ಮಾಡಿದ ಸಂದರ್ಭದಲ್ಲಿ, ಯಾವ ಕಾರಣಕ್ಕಾಗಿ ವಾರೆಂಟನ್ನು ವಾವಸು ಮಾಡಲಾಗಿದೆ ಎಂಬುದನು ತಿಳಿದು ಕೊಳ್ಳುವ ಸಲುವಾಗಿ ಭೇಲಿಪ್‌ನನ್ನು ವಿಚಾರಣೆ ಮಾಡುವ ಆಧಿಕಾರ ಇದೆ ಎಂದು ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 222 ರಲ್ಲಿ ಹೇಳಿದೆ. ನಿಯಮ 225 ತೀರ್ಪುಋಣಿಯನ್ನು ಪ್ರೋಸಸ್ ಸರ್ವರ್ ವಶದಲ್ಲಿ ಇರಿಸಿಕೊಳ್ಳಬಾರದು, ಕಲವು ವಿಶೇಷ ಸಂದರ್ಭಗಳ್ಲಿ ಮಾತ್ರ ಹಾಗೆ ಮಾಡ ಬಹುದು ಮತ್ತು ಅದಕ್ಕೆ ಹೆಚ್ಚಿನ ಮೊತ್ತವನ್ನು ಡಿಕ್ರಿದಾರ ಪಾವತಿಸಿಬೇಕು ಎಂದು ಹೇಳುತ್ತದೆ.

ದಸ್ತಗಿರಿ ವಾರೆಂಟನ್ನು ಕಾರ್ಯಗತಗೊಳಿಸುವಾಗ ಮೇಲೆ ಹೇಳಿದ ನಿಯಮಾವಳಿಗಳನ್ನು ತಿಳಿದುಕೊಳ್ಳುವುದು ಬಹಳ ಅವಶ್ಯಕ. ದಸ್ತಗಿರಿ ಮಾಡಲು ಆಗದೇ ಇದ್ದಲ್ಲಿ, ಅದಕ್ಕೆ ಸಕಾರಣಗಳನ್ನು ವರದಿಯಲ್ಲಿ ವಿವರವಾಗಿ ಬರೆಯಬೇಕು. ಅಂತಹ ವರದಿಗಳು ಮುಂದಿನ ಕ್ರಮ ಕೈಗೊಳ್ಳಲು ಬಹಳಷ್ಟು ಸಹಕಾರಿಯಾಗುತ್ತದೆ. ದಸ್ತಗಿರಿ ಮಾಡಲು ಹೋದಾಗ ತಡೆ ಉಂಟು ಮಾಡಿದಲ್ಲಿ, ಯಾವ ರೀತಿಯ ತಡೆಉಂಟಾಗಿದೆ ಎಂಬುದನ್ನು ವರದಿಯಲ್ಲಿ ನಮೂದಿ ಸಲ್ಲಿಸಬೇಕು.

*****

## ವಿಷಯ ಸೂಚಿ: 4

## ನಿರ್ದಿಷ್ಟ ಸ್ವತ್ತಿನ ಸ್ವಾಧೀನ ಡಿಕ್ರಿ, ದಾಂಪತ್ಯ ಹಕ್ಕಿನ ಪೂರ್ವ ಸ್ಥಿತಿ ಪಾಲನೆ ಮತ್ತು ನಿರ್ಭಂದಕಾಜ್ಞೆ ಡಿಕ್ರಿ, ದಸ್ತಾವೇಜು ಬರೆದು ಕೊಡಲು ಆದೇಶಿಸಿದ ಡಿಕ್ರಿ ಸ್ಥಿರ ಸ್ವತ್ತಿನ ಡಿಕ್ರಿ ಮತ್ತು ಬಾಡಿಗೆದಾರ ಅನುಭೋಗದಲ್ಲಿರುವ ಡಿಕ್ರಿಯ ಅಮಲ್ಜಾರಿ ವಿಧಾನಗಳು

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21, ನಿಯಮ 31 ಚರಸ್ವತ್ತಿಗೆ ಸಂಬಂಧಿಸಿದ ಡಿಕ್ರಿಯನ್ನು ಯಾವ ರೀತಿ ಕಾರ್ಯಗತಗೊಳಿಸಬೇಕು ಎಂಬುದರ ಬಗ್ಗೆ ಹೇಳುತ್ತದೆ. ಸದರಿ ಚರಸ್ವತ್ತನ್ನು ಡಿಕ್ರಿದಾರನ ಸ್ವಾಧೀನಕ್ಕೆ ಕೊಡುವ ಮೂಲಕ, ತೀರ್ಪುಋಣಿಯನ್ನು ಬಂಧೀಖಾನೆಯಲ್ಲಿ ಇಡುವ ಮೂಲಕ ಅಥವಾ ಆತನಿಗೆ ಸೇರಿದ ಸ್ವತ್ತನ್ನು ಜಪ್ತಿ ಮಾಡುವ ಮೂಲಕ ಡಿಕ್ರಿಯನ್ನು ಅಮಲ್ಜಾರಿ ಮಾಡಬಹುದು. ಸ್ವತ್ತನ್ನು ಜಪ್ತಿ ಮಾಡಿದ್ದಲ್ಲಿ ಸದರಿ ಜಪ್ತಿ ಆದೇಶ ಮೂರು ತಿಂಗಳವರೆಗೆ ಚಾಲ್ತಿಯಲ್ಲಿ ಇರುತ್ತದೆ. ಮೂರು ತಿಂಗಳ ಬಳಿಕ ಮಾರಾಟ ಮಾಡಲು ಕ್ರಮ ಕೈಗೊಳ್ಳದೇ ಇದ್ದರೆ ಜಪ್ತಿ ರದ್ದಾಗುತ್ತದೆ.

### ದಾಂಪತ್ಯದ ಪುನ:ಸ್ಥಾಪನೆ ಮತ್ತು ನಿರ್ಭಂದಕಾಜ್ಞೆಯ ಡಿಕ್ರಿಗಳನ್ನು ಕಾರ್ಯಗತಗೊಳಿಸುವ ವಿಧಾನ:

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 32 ದಾಂಪತ್ಯದ ಹಕ್ಕು ಪುನ:ಸ್ಥಾಪನೆ, ಡಿಕ್ರಿ ಮತ್ತು ನಿರ್ಬಂಧ ಕಾಜ್ಞೆಯ ಡಿಕ್ರಿಯ ಪರಿಪಾಲನೆಯನ್ನು ಹೇಗೆ ಮಾಡಬೇಕು ಎಂಬುದನ್ನು ಹೇಳುತ್ತದೆ. ಇಂತಹ ಡಿಕ್ರಿಗಳನ್ನು ಪರಿಪಾಲನೆ ಮಾಡಲು ಯಾವುದೇ ಸಕಾರಣವಿಲ್ಲದೆ, ತೀರ್ಪುಋಣಿ ನಿರಾಕರಿಸಿದ್ದಲ್ಲಿ ಆತನನ್ನು ಸಿವಿಲ್ ಬಂದೀಖಾನೆಯಲ್ಲಿ ಇಡುವ ಮೂಲಕ ಅಥವಾ ಆಸ್ತಿಯನ್ನು ಜಪ್ತಿ ಮಾಡುವುದರ ಮೂಲಕ ಡಿಕ್ರಿಯನ್ನು ಜಾರಿಗೊಳಿಸಬಹುದು.

ಜಪ್ತಿಯಾದ ನಂತರ ಕೂಡ ತೀರ್ಪುಋಣಿ, ಡಿಕ್ರಿ ಪ್ರಕಾರ ನಡೆದುಕೊಳ್ಳದೇ ಇದ್ದಲ್ಲಿ, ಸದರಿ ಆಸ್ತಿಯನ್ನು ಮಾರಾಟ ಮಾಡಿ ಡಿಕ್ರೀದಾರನಿಗೆ ಪರಿಹಾರ ಕೊಡಬಹುದು. ಜಪ್ತಿಯ 6 ತಿಂಗಳ ಒಳಗೆ ಸದರಿ ಆಸ್ತಿಯನ್ನು ಮಾರಾಟ ಮಾಡಲು ಕ್ರಮ ಕೈಗೊಳ್ಳದೇ ಇದ್ದಲ್ಲಿ. ಜಪ್ತಿ ಕೊನೆಗೊಳ್ಳುತ್ತದೆ. ದಾಂಪತ್ಯ ಹಕ್ಕಿನ

ಪುನಃಸ್ಥಾಪನೆಯ ಡಿಕ್ರಿಯನ್ನು ಉಲ್ಲಂಘಿಸಿದಾಗ ಜೀವನಾಂಶ ಕೊಡಲು ಆದೇಶಿಸುವ ಹಕ್ಕು ಕೂಡ ನ್ಯಾಯಾಲಯಕ್ಕೆ ಇದೆ.

**<u>ದಸ್ತಾವೇಜನ್ನು ಮತ್ತು ವರ್ಗಾವಣೆ ಲಿಖಿತಕ್ಕೆ ಹಿಂಬರಹದ ಡಿಕ್ರಿಯನ್ನು ಜಾರಿಗೊಳಿಸುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ನಿಯಮ 34 ದಸ್ತಾವೇಜು ಬರೆದುಕೊಡುವ ಅಥವಾ ವರ್ಗಾವಣೆಯ ಲಿಖಿತಕ್ಕೆ ಹಿಂಬರಹ ಮಾಡುವಂತೆ ಆದೇಶಿಸಿದ ಡಿಕ್ರಿಯನ್ನು ಅಮಲ್ಜಾರಿ ಮಾಡುವ ವಿಧಾನದ ಬಗ್ಗೆ ಹೇಳುತ್ತದೆ. ದಸ್ತಾವೇಜು ಡ್ರಾಫ್ಟಿಗೆ ತಕರಾರು ಸಲ್ಲಿಸುವ ಬಗ್ಗೆ ಅಪೆಂಡಿಕ್ಸ್ 'ಇ' ಯ ನಮೂನೆ 10 ರಂತೆ ನೋಟೀಸನ್ನು ನೀಡಬೇಕು.

**<u>ಸ್ಥಿರ ಸ್ವತ್ತನ್ನು ಸ್ವಾಧಿನತೆಕೊಡುವ ಡಿಕ್ರಿಯನ್ನು ಕಾರ್ಯಗತಗೊಳಿಸುವ ವಿಧಾನ:</u>**

ಕ್ರಮಾದೇಶ 21 ನಿಯಮ 35 ಸ್ಥಿರ ಸ್ವತ್ತನ್ನು ಸ್ವಾಧೀನತೆಗೆ ಕೊಡುವ ಬಗ್ಗೆ ವಿವರಿಸಲಾಗಿದೆ. ಸ್ಥಿರ ಸೊತ್ತಿನ ಸ್ವಾಧೀನತೆಯನ್ನು ಬಿಟ್ಟುಕೊಡಲು ಡಿಕ್ರಿಗೆ ಬದ್ಧನಾಗಿರುವನು ನಿರಾಕರಿಸಿದಾಗ ಸದರಿ ವ್ಯಕ್ತಿಯನ್ನು ಹೊರಹಾಕುವ ಮೂಲಕ ಸ್ವಾಧೀನತೆಯನ್ನು ಡಿಕ್ರಿದಾರ ಅಥವಾ ಆತನ ಪರವಾಗಿ ನೇಮಕಗೊಂಡ ವ್ಯಕ್ತಿಗೆ ನೀಡಬೇಕು. ಸ್ಥಿರಸ್ವತ್ತನ್ನು ಸ್ವಾಧಿನತೆ ಡಿಕ್ರಿಯನ್ನು ಅಪೆಂಡಿಕ್ಸ್ 'ಇ' ಯ ನಮೂನೆ 11 ರಂತೆ ನೀಡಬೇಕು.

**<u>ಜಂಟಿ ಸ್ವಾಧೀನತೆಯ ಡಿಕ್ರಿಯನ್ನು ಕಾರ್ಯಗತಗೊಳಿಸುವ ವಿಧಾನ:</u>**

ಸ್ಥಿರ ಸ್ವತ್ತಿನ ಸ್ವಾಧೀನತೆಯನ್ನು ಜಂಟಿ ಸ್ವಾಧೀನಕ್ಕೆ ಕೊಡಬೇಕು ಎಂದು ಆದೇಶವಾಗಿದ್ದಲ್ಲಿ, ವಾರೆಂಟಿನ ಪ್ರತಿಯನ್ನು ಸ್ವತ್ತಿನ ಎದ್ದು ಕಾಣುವ ಭಾಗದಲ್ಲಿ ಅಂಟಿಸುವ ಮೂಲಕ ಮತ್ತು ಡಂಗೂರ ಸಾರಿಸುವ ಮೂಲಕ ಅಥವಾ ಇತರ ಸಾಂಪ್ರದಾಯಿಕ ವಿಧಾನದ ಮೂಲಕ ಸ್ವಾಧೀನತೆಯನ್ನು ಕೊಡಿಸಬೇಕಾಗುತ್ತದೆ ಎಂದು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ನಿಯಮ 35(2) ರಲ್ಲಿ ಹೇಳಿದೆ.

**<u>ಬಾಡಿಗೆದಾರ ಇಲ್ಲ ಡಿಕ್ರಿಯಿಂದ ಭಾಧಿತನಲ್ಲದ ವ್ಯಕ್ತಿಯ ಸ್ವಾಧಿನತೆಯಲ್ಲಿ ಸ್ಥಿರ ಆಸ್ತಿ ಇದ್ದಾಗ, ಅದರ ಸ್ವಾಧಿನತೆಯನ್ನು ಡಿಕ್ರಿದಾರನಿಗೆ ನೀಡುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 36 ಡಿಕ್ರಿಯಿಂದ ಭಾಧಿತನಾಗದೇ ಇರುವ ವ್ಯಕ್ತಿಯ ಕಾನೂನು ಬದ್ದ ಸ್ವಾಧೀನತೆಯಲ್ಲಿ ಇದ್ದಾಗ ಅದರ ಸ್ವಾಧೀನತೆಯನ್ನು ಹೇಗೆ ನೀಡಬೇಕು ಎಂಬುದರ ಬಗ್ಗೆ ಹೇಳುತ್ತದೆ. ಇಂತಹ ಪರಿಸ್ಥಿತಿಯಲ್ಲಿ ವಾರೆಂಟಿನ ಪ್ರತಿಯನ್ನು ಕಾಣುವ ಜಾಗದಲ್ಲಿ ಅಂಟಿಸುವ ಮೂಲಕ ಡಂಗೂರ ಸಾರುವ ಮೂಲಕ ಅಥವಾ ಇತರ ಸಾಂಪ್ರದಾಯಿಕ ವಿಧಾನದ ಮೂಲಕ ಡಿಕ್ರೀದಾರ ಅಥವಾ ಆತನಿಂದ ನಿಯುಕ್ತಿಗೊಂಡ ವ್ಯಕ್ತಿ ಸ್ವತ್ತಿನ ಸ್ವಾಧೀನತೆಯನ್ನು ನೀಡಬೇಕು ಎಂದು ಹೇಳುತ್ತದೆ.

ಕಟ್ಟಡದ ಸ್ವಾಧೀನತೆಯನ್ನು ನೀಡುವುದಕ್ಕಿಂತ ಮೊದಲು ಮೂಲಕ ರೂಡಿಗಳಿಗನುಸಾರವಾಗಿ, ಬಹಿರಂಗವಾಗಿ ಕಾಣಿಸಿಕೊಳ್ಳದ ಮಹಿಳೆ ಒಳಗೆ ಇದ್ದಲ್ಲಿ, ಆಕೆಗೆ ಹೊರಗೆ ಹೋಗಲು ಸೂಕ್ತರೀತಿಯಲ್ಲಿ ಅವಕಾಶ ಮಾಡಿಕೊಟ್ಟ ನಂತರ ಬೀಗ ಮುರಿದು, ಇಲ್ಲಾ ಬಾಗಿಲನ್ನು ತೆರೆದು ಇಲ್ಲ, ಒಡೆದು ಸ್ವತ್ತಿನ ಸ್ವಾಧೀನತೆಯನ್ನು ಪಡೆದು ನಂತರ ಡಿಕ್ರಿದಾರನ ಸ್ವಾಧೀನತೆಗೆ ನೀಡಬೇಕು.

**<u>ಬೀಗಹಾಕಿದ ಕಟ್ಟಡದ ಸ್ವಾಧೀನತೆಯನ್ನು ನೀಡುವ ರೀತಿ:</u>**

ನ್ಯಾಯಾಲಯದ ಆದೇಶವಿಲ್ಲದೆ ಕಟ್ಟಡದ ಬೀಗವನ್ನು ಮುರಿದು ಸ್ವಾಧೀನತೆಯನ್ನು ನೀಡಬಾರದು. ಕಟ್ಟಡದ ಬೀಗ ಹಾಕಿದ್ದರೇ ಅಥವಾ, ತೀವ್ರತರದ ಪ್ರತಿರೋಧ ಇದ್ದಲ್ಲಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿ, ಬೀಗ ಒಡೆಯಲು ಅನುಮತಿ ಮತ್ತು ಅಗತ್ಯ ಬಿದ್ದಲ್ಲಿ, ಪೊಲೀಸ್ ರಕ್ಷಣೆಯನ್ನು ನೀಡುವಂತೆ ಕೇಳಿಕೊಳ್ಳಬೇಕು. ಕಟ್ಟಡದ ಒಳಗೆ ಚರವಸ್ತುಗಳು ಇದ್ದಲ್ಲಿ ಅವುಗಳ ಪಟ್ಟಿಯನ್ನು ಮಾಡಿ ಅವುಗಳ ಸ್ವಾಧೀನತೆಯನ್ನು ತೀರ್ಪುಋಣಿಗೆ ನೀಡತಕ್ಕದ್ದು. ಆತ ಇಲ್ಲದೇ ಇದ್ದಲ್ಲಿ ಅಥವಾ ತೆಗೆದುಕೊಳ್ಳಲು ನಿರಾಕರಿಸಿದ್ದಲ್ಲಿ, ಸದರಿ ಚರವಸ್ತುಗಳನ್ನು ಡಿಕ್ರಿದಾರ ಸ್ವಾಧೀನತೆಗೆ ನೀಡಿ. ಚರಸ್ವತುಗಳ ಪಟ್ಟಿಗೆ ಸಹಿಗಳನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಡಿಕ್ರಿದಾರ ಇಲ್ಲ ಆತನಿಂದ ನಿಯುಕ್ತಿಗೊಂಡ. ವ್ಯಕ್ತಿಗೆ ಸ್ವಾಧೀನತೆ ನೀಡಿದ ಬಗ್ಗೆ ಸಹಿಗಳನ್ನು ಪಡೆದು ಕೊಳ್ಳತಕ್ಕದ್ದು. ಸಾಕ್ಷಿದಾರರ ಸಹಿಗಳನ್ನು ಕೂಡ ಪಡೆಯುವುದು ಸೂಕ್ತ.

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 219 ಸ್ವತ್ತಿನ ಸ್ವಾದೀನತೆ ಡಿಕ್ರಿಯನ್ನು ಕಾರ್ಯಗತಗೊಳಿಸುವುದಕ್ಕೆ ಹೋಗುವುದಕ್ಕಿಂತ ಮೊದಲು, ಡಿಕ್ರಿದಾರ, ಆತನ ಏಜೆಂಟ್, ಇಲ್ಲ ವಕೀಲರಿಗೆ ಅಥವಾ ವಕೀಲರ ನೋಂದಾಯಿತ ಗುಮಾಸ್ತನಿಗೆ ತಿಳಿಸ ಬೇಕು ಎಂದು ಹೇಳುತ್ತದೆ. ಯಾವ ದಿನ, ಎಷ್ಟು ಹೊತ್ತಿಗೆ ವಾರಂಟನ್ನು ಕಾರ್ಯಗತಗೊಳಿಸಲು ಹೋಗುವುದಾಗಿ ತಿಳಿಸಿ, ಅದನ್ನು ವಾರಂಟಿನ ಹಿಂಭಾಗದಲ್ಲಿ ನಮೂದಿಸಿ, ಯಾರಿಗೆ ತಿಳಿಸಲಾಗಿದೆಯೋ ಅವರ ಸಹಿಯನ್ನು ಪಡೆಯಬೇಕು ಎಂದು ಹೇಳುತ್ತದೆ.

**<u>ವಾರೆಂಟಿನ ಕಾರ್ಯಗತಗೊಳಿಸುವಿಕೆಗೆ ಪೋಲಿಸರ ಸಹಾಯವನ್ನು ಪಡೆಯುವ ರೀತಿ:</u>**

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 220(2) ರಲ್ಲಿ, ವಾರಂಟನ್ನು ಕಾರ್ಯಗತಗೊಳಿಸಲು ಪೋಲಿಸರ ಸಹಾಯದ ಅವಶ್ಯಕತೆ ಬೇಕಾಗಿದ್ದಲ್ಲಿ, ಬೇಲಿಪ್ ತನ್ನ ವರದಿಯಲ್ಲಿ ಹೇಳಬೇಕು. ನ್ಯಾಯಲಯ ವರದಿಯನ್ನು ಪರಿಶೀಲಿಸಿ, ಯುಕ್ತ ಅದೇಶವನ್ನು ಮಾಡುತ್ತದೆ. ಪೋಲಿಸ್ ಸಹಾಯವನ್ನು ನೀಡಬೇಕು ಎಂದು ಅದೇಶ ಅದಲ್ಲಿ, ಪೋಲಿಸರನ್ನು ನಿಯೋಜಿಸುವುದು ಪೋಲಿಸ್ ಇಲಾಖೆಯ ಕರ್ತವ್ಯ ಎಂದು ನಿಯಮದಲ್ಲಿ ಹೇಳಿದೆ. ನ್ಯಾಯಲಯದ ಅದೇಶ ಇದ್ದಾಗಲೂ, ಸಂಬಂಧಪಟ್ಟ ಪೋಲಿಸ್ ಠಾಣೆಯ ಅಧಿಕಾರಿ ಪೋಲಿಸರನ್ನು ನಿಯೋಜಿಸಲು ನಿರಾಕರಿಸಿದಲ್ಲಿ, ಅದನ್ನು ಲಿಖಿತ ರೂಪದಲ್ಲಿ ನ್ಯಾಯಲಯಕ್ಕೆ ತಿಳಿಸ ತಕ್ಕದ್ದು.

*****

# <u>ವಿಷಯ ಸೂಚಿ:5</u>

## ಚರಸ್ವತ್ತುಗಳ ಜಪ್ತಿ, ಸಾಗಾಣಿಕೆ ಮತ್ತು ಸಂರಕ್ಷಣೆಯ

## ವಿಧಾನ

ಚರ ಮತ್ತು ಸ್ಥಿರ ಆಸ್ತಿಗಳನ್ನು ಜಪ್ತಿಮಾಡಿ, ಮಾರಾಟ ಮಾಡಿ ಅದರಿಂದ ಬಂದ ಮೊತ್ತವನ್ನು ಡಿಕ್ತಿದಾರನಿಗೆ ನೀಡುವ ಮೂಲಕ ಡಿಕ್ತಿಯನ್ನು ಅಮಲ್ಜಾರಿ ಮಾಡಬಹುದು ಎಂದು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 51 ರಲ್ಲಿ ಹೇಳಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 60 ರಿಂದ 65 ಮತ್ತು 67 ಸ್ವತ್ತುಗಳನ್ನು ಜಪ್ತಿಮಾಡುವ ಮತ್ತು ಮಾರಾಟ ಮಾಡುವ ವಿದಾನಗಳ ಬಗ್ಗೆ ಹೇಳುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ  ನಿಯಮ 41 ರಿಂದ 92 ರಲ್ಲಿ ಹೇಳಿದೆ. ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ  115 ರಿಂದ 131 ರಲ್ಲಿ ಚರ ಸ್ವತ್ತುಗಳ ಜಪ್ತಿ, ಸಂರಕ್ಷಣೆ, ಮಾರಾಟ ಮತ್ತು ಸ್ಥಿರ ಸ್ವತ್ತಿನ ಜಪ್ತಿ ಮಾತ್ತು ಮಾರಾಟ ಸಂದರ್ಭದಲ್ಲಿ ಅನುಸರಿಬೇಕಾದ ವಿಧಾನಗಳ ಬಗ್ಗೆ ಹೇಳಿದೆ.

<u>**ತೀರ್ಪುಋಣಿಯ ಬಳಿ ಇರುವ** ಸ್ಥಿರ ಮತ್ತು ಚರ ಆಸ್ತಿಗಳ ವಿವರಗಳನ್ನು ನೀಡುವಂತೆ ಆದೇಶಿಸುವ ಅಧಿಕಾರ</u>

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21ರ, ನಿಯಮ 41 ತೀರ್ಪುಋಣಿಯನ್ನು ವಿಚಾರಣೆ ಮಾಡಿ ಸ್ವತ್ತಿನ ವಿವರಗಳನ್ನು ತಿಸಿದುಕೊಳ್ಳುವ ಅಧಿಕಾರವನ್ನು ನ್ಯಾಯಾಲಯಕ್ಕೆ ನೀಡಿದೆ.  ಹಾಗೆ ಆದೇಶಿಸಿದಾಗ, ತೀರ್ಪುಋಣಿ ಸಿವಿಲ್ ಪ್ರಕ್ರಿಯಾ ಸಂಹಿತೆಯ ಅಪೆಂಡಿಕ್ಸ 'ಇ' ಯ ಮಾದರಿ 16 A ಪ್ರಕಾರ ಪ್ರಮಾಣ ಪತ್ರದ ಜೊತೆ ಆಸ್ತಿ ವಿವರಗಳನ್ನು ನೀಡಬೇಕು.

<u>**ಚರ ಸ್ವತ್ತುಗಳು ಇರುವ ವಾಸದ ಮನೆಯ ಒಳಗಡೆ ಪ್ರವೇಶಿಸುವ ಮತ್ತು ಬಾಗಿಲಿಗೆ ಬೀಗ ಹಾಕಿದ್ದಲ್ಲಿ ಅದನ್ನು ಒಡೆಯುವ ವಿಧಾನ:**</u>

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 62 ಚರ ಸ್ವತ್ತುಗಳನ್ನು ಜಪ್ತಿಮಾಡಲು ಸೂರ್ಯೋದಯಕ್ಕಿಂತ ಮೊದಲು ಮತ್ತು ಸೂರ್ಯಾಸ್ತದ ನಂತರ ವಾಸದ ಮನೆಯ

ಒಳಗಡೆ ಪ್ರವೇಶಿಸುವುದನ್ನು ನಿಷೇಧಿಸುತ್ತದೆ. ವಾಸದ ಮನೆಯ ಮುಂದಿನ ಬಾಗಿಲಿಗೆ ಬೀಗ ಹಾಕಿದ್ದಲ್ಲಿ ನ್ಯಾಯಾಲಯದ ಆದೇಶವಿಲ್ಲದೆ ಅದನ್ನು ಒಡೆದು ಒಳ ಪ್ರವೇಶಿಸಬಾರದು. ವಾಸದ ಮನೆಯ ಒಳಗಡೆ ಪ್ರವೇಶಿಸಿದ ನಂತರ, ಯಾವುದೇ ರೂಮಿನ ಬಾಗಿಲು ಹಾಕಿದ್ದು ಅದರೊಳಗೆ ಚರ ಸ್ವತ್ತುಗಳು ಇವೆ ಎಂದು ತಿಳಿದು ಬಂದಲ್ಲಿ, ಸದರಿ ರೂಮಿನ ಬಾಗಿಲನ್ನು ಒಡೆಯುವ ಅಧಿಕಾರ ಬೇಲೀಫಿಗೆ ಇದೆ. ಅಂತ ಸಂದರ್ಭದಲ್ಲಿ ನ್ಯಾಯಾಲಯದ ಆದೇಶದ ಅವಶ್ಯಕತೆ ಇರುವುದಿಲ್ಲ

**<u>ಚರ ಸ್ವತ್ತುಗಳನ್ನು ಸ್ವಾಧಿನತೆಗೆ ತೆಗೆದುಕೊಳ್ಳುವ ವಿಧಾನ:</u>**

ಕೃಷಿ ಉತ್ಪನ್ನವಲ್ಲದ ಇತರ ಚರಸ್ವತ್ತುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಮೂಲಕ ಜಪ್ತಿ ಮಾಡಬೇಕು ಮತ್ತು ಬೇಲಿಫ್ ಅವುಗಳ ಸ್ವಾಧೀನತೆಯನ್ನು ಹೊಂದಬೇಕು, ಇಲ್ಲ ಬೇರೆಯೊಬ್ಬರ ಸ್ವಾಧೀನಕ್ಕೆ ಕೊಡಬೇಕು ಎಂದು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21ರ ನಿಯಮ 43 ಹೇಳುತ್ತದೆ. ಕರ್ನಾಟಕ ಸಿವಿಲ್ ನಡವಳಿಕೆಯ ನಿಯಮ 116 ರ ಪ್ರಕಾರ ಜಪ್ತಿ ಮಾಡಲಾದ. ಸ್ವತ್ತುಗಳ ಪಟ್ಟಿಯನ್ನು ಸಾಕಷ್ಟು ವಿವರಣೆಗಳನ್ನು ಬರೆದು. ಯಾರಿಂದ ಜಪ್ತಿ ಮಾಡಲಾಯಿತೋ ಆ ವ್ಯಕ್ತಿಗೆ, ಇಲ್ಲ ವಯಸ್ಕ ಸದಸ್ಯರಿಗೆ ನೀಡತಕ್ಕದ್ದು, ಯಾರೂ ಇಲ್ಲದೇ ಇದ್ದಲ್ಲಿ. ಸದರಿ ಪಟ್ಟಿಯ ಪ್ರತಿಯನ್ನು ಕಟ್ಟಡದ ಹೊರಬಾಗಿಲಿನಲ್ಲಿ ಅಂಟಿಸಬೇಕು ಮತ್ತು ಚರಸ್ವತ್ತುಗಳನ್ನು ಶೀಘ್ರವಾಗಿ ನ್ಯಾಯಾಲಯಕ್ಕೆ ಸಾಗಿಸಬೇಕು, ಇಲ್ಲ ಸಂರಕ್ಷಣೆಯಲ್ಲಿ ಇಡಲು ಸೂಕ್ತ ಕ್ರಮ ಕೈಗೊಳ್ಳಬೇಕು.

**<u>ಕೃಷಿಯೇತರ ಜಮೀನುಗಳನ್ನು ಜಪ್ತಿಮಾಡುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21ರ ನಿಯಮ 43 ಎ ಮತ್ತು ಕರ್ನಾಟಕ ಸಿವಿಲ್ ನಡವಳಿಗಳ ನಿಯಮ 117 ರಿಂದ 128 ರ ಸ್ವತ್ತನ್ನು ಅಭಿರಕ್ಷೆಯಲ್ಲಿ ಇಡುವ ಬಗ್ಗೆ ಮತ್ತು ಖರ್ಚುಗಳನ್ನು ಭರಿಸುವ ಬಗ್ಗೆ ಹೇಳುತ್ತದೆ. ಜಪ್ತಿ ಮಾಡಲಾದ ಸ್ವತ್ತು ಜಾನುವಾರುಗಳು ಬೇಸಾಯ ಉಪಕರಣಗಳು ಅಥವಾ ಸಾಗಾಣಿಕೆ ಮಾಡುವಂತಹ ಸ್ವತ್ತುಗಳಾಗಿದ್ದು, ಜಪ್ತಿ ಮಾಡಿದ ವಸ್ತುಗಳನ್ನು ಸ್ಥಳದಲ್ಲಿ ಅಥವಾ ಗ್ರಾಮದ ಇನ್ನಿತರ ಸ್ಥಳದಲ್ಲಿ ಗೌರವಾನ್ವಿತ ವ್ಯಕ್ತಿಯ ಸ್ವಾಧೀನತೆಯಲ್ಲಿ ಇಡಬಹುದು. ಚರಸ್ವತ್ತುಗಳನ್ನು ಇಟ್ಟುಕೊಳ್ಳುವ ಜವಾಬ್ದಾರಿ ಆತನದ್ದಾಗಿರುತ್ತದೆ. ಜಪ್ತಿ ಮಾಡಲಾದ ಸ್ವತ್ತು ಅಥವಾ ಸ್ಫೋಟಕವಸ್ತು ಆಗಿದ್ದಲ್ಲಿ ಅದನ್ನು ಲೈಸೆನ್ಸ್

ಪಡೆದಿರುವ ವ್ಯಕ್ತಿಯ ಸ್ವಾಧೀನತೆಗೆ ಅಥವಾ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟ ಪೊಲೀಸ್ ಠಾಣೆಯಲ್ಲಿ ಇಡಬಹುದು.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ನಿಯಮ 43 ಮತ್ತು 45 ಕೃಷಿ ಉತ್ಪನ್ನಗಳನ್ನು ಹೇಗೆ ಜಪ್ತಿ ಮಾಡಬೇಕು ಎಂದು ಹೇಳುತ್ತದೆ. ಕಲಂ 60 ರಲ್ಲಿ ಹೇಳಿದ ಸ್ಥಿರ ಮತ್ತು ಚರ ಸ್ವತ್ತುಗಳನ್ನು ಹೊರತುಪಡಿಸಿ ಇತರ ವಸ್ತುಗಳನ್ನು ಮಾತ್ರ ಜಪ್ತಿ ಮಾಡಿಕೊಳ್ಳತಕ್ಕದ್ದು. ಸಿವಿಲ್ ಪ್ರಕ್ರಿಯಾ ಸಂಹಿತೆಯ ಅಪೆಂಡಿಕ್ಸ್ 'ಇ' ಯ ನಮೂನೆ 8 ರಂತೆ ಜಪ್ತಿವಾರೆಂಟನ್ನು ತಯಾರಿಸಬೇಕು.

**<u>ಜಪ್ತಿಮಾಡಲಾದ ಚರ ಸ್ವತ್ತುಗಳನ್ನು ಸಾಗಿಸುವ, ಸಂರಕ್ಷಿಸುವ ಮತ್ತು ಮಾರಾಟ ಮಾಡುವ ಖರ್ಚನ್ನು ಭರಿಸುವ ಜವಾಬ್ದಾರಿ:</u>**

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 118 ಮತ್ತು 119 ಜಪ್ತಿ ಮಾಡಲಾದ ಚರಸ್ವತ್ತುಗಳನ್ನು ಸಾಗಿಸುವ, ಸಂರಕ್ಷಿಸುವ ಮತ್ತು ಮಾರಾಟ ಪ್ರಕ್ರಿಯೆಯ ಮಾಡುವ ಖರ್ಚನ್ನು ಡಿಕ್ರಿದಾರ ಭರಿಸಬೇಕು ಮತ್ತು ಭರಿಸದೇ ಇದ್ದಲ್ಲಿ ಜಪ್ತಿ ಆದೇಶವನ್ನು ವಾಪಸು ತೆಗೆದುಕೊಳ್ಳಲು ಆದೇಶಿಸುವ ಅಧಿಕಾರ ನ್ಯಾಯಾಲಯಕ್ಕೆ ಇದೆ ಎಂದು ಹೇಳುತ್ತದೆ. ನಿಯಮ 121 ಜಪ್ತಿ ಮಾಡಲಾದ ನಗದು, ಒಡವೆ, ಇಲ್ಲ ಸರ್ಕಾರಿ ಭದ್ರತೆಗಳಾಗಿದಲ್ಲಿ ಅವುಗಳನ್ನು ಪೆಟ್ಟಿಗೆಯಲ್ಲಿ ಹಾಕಿ ಸೀಲು ಮಾಡಿ ಸರ್ಕಾರಿ ಖಜಾನೆಗೆ ಕಳುಹಿಸಬೇಕು.

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 122 ಸ್ವಾಧೀನತೆಯಲ್ಲಿ ಇರುವ ಬಗ್ಗೆ ಹೇಳುತ್ತದೆ. ನಿಯಮ 124 ರ ಪ್ರಕಾರ ಚರಸ್ವತ್ತಿನ ಸ್ವಾಧೀನತೆಯ ಜವಾಬ್ದಾರಿ ನೇರವಾಗಿ ನಾಜಿರನದಾಗಿರುತ್ತದೆ ಎಂದು ಹೇಳುತ್ತದೆ. ಈ ಬಗ್ಗೆ ರಿಜಿಸ್ಟರ್ ನಂ 32 ರಲ್ಲಿ ನಮೂದಿಸಬೇಕು. ನ್ಯಾಯಾಲಯವು ಆದೇಶಿಸಿದ ಮೊತ್ತವನ್ನು ಅಭಿರಕ್ಷೆ ವೆಚ್ಚವಾಗಿ ಡಿಕ್ರಿದಾರ ನೀಡಬೇಕು. ನಿಯಮ 126 ಮತ್ತು 127 ಜಾನುವಾರುಗಳು ಅಭಿರಕ್ಷೆ ಮತ್ತು ಅವುಗಳನ್ನು ಸಾಕುವ ಖರ್ಚುಗಳನ್ನು ಭರಿಸುವ ಬಗ್ಗೆ ಹೇಳತ್ತದೆ.

**<u>ಸ್ವಾಧಿನತೆ ವಾರೆಂಟ್, ಜಪ್ತಿ ಮತ್ತು ಮಾರಾಟ ವಾರೆಂಟನ್ನು ಕಾರ್ಯಗತಗೊಳಿಸಲು ಹೋಗುವ ಬಗ್ಗೆ ಡಿಕ್ರಿದಾರ ತಿಳಿಸುವ ಅವಶ್ಯಕತೆ:</u>**

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 219 ಸ್ವತ್ತಿನ ಸ್ವಾದೀನತೆ ವಾರೆಂಟ್, ಜಪ್ತಿ ವಾರೆಂಟ್ ಮತ್ತು ಮಾರಾಟದ ವಾರೆಂಟನ್ನು ಕಾರ್ಯಗತಗೊಳಿಸುವುದಕ್ಕೆ ಹೋಗುವುದಕ್ಕಿಂತ ಮೊದಲು, ಡಿಕ್ತಿದಾರ, ಆತನ ಏಜೆಂಟ್, ಇಲ್ಲ ವಕೀಲರಿಗೆ ಅಥವಾ ವಕೀಲರ ನೋಂದಾಯಿತ ಗುಮಾಸ್ತನಿಗೆ ತಿಳಿಸ ಬೇಕು ಎಂದು ಹೇಳುತ್ತದೆ. ಯಾವ ದಿನ, ಎಷ್ಟು ಹೊತ್ತಿಗೆ ವಾರಂಟೆನ್ನು ಕಾರ್ಯಗತಗೊಳಿಸಲು ಹೋಗುವುದಾಗಿ ತಿಳಿಸಿ, ಸಹಿಯನ್ನು ವಾರಂಟಿನಲ್ಲಿ ಪಡೆಯಬೇಕು ಎಂದು ಹೇಳುತ್ತದೆ.

## <u>ಜಪ್ತಿ ವಾರೆಂಟನ್ನು ಕಾರ್ಯಗತಗೊಳಿಸುವ ವಿಧಾನ:</u>

ಜಪ್ತಿ ವಾರೆಂಟಿನ ಜೊತೆ ಚರಸ್ವತ್ತುಗಳ ಪಟ್ಟಿಯನ್ನು ಕಳುಹಿಸಬೇಕಾದ ಅವಶ್ಯಕತೆ ಇರುವುದಿಲ್ಲ. ಚರಸ್ವತ್ತುಗಳ ಸಂಬಂಧಿಸಿದ ವಾರೆಂಟನ್ನು ಕಾರ್ಯಗತಗೊಳಿಸಲು ಹೋಗುವ ಮುನ್ನ ಡಿಕ್ರಿದಾರನಿಗೆ ತಿಳಿಸಬೇಕು. ಸ್ಥಳದಲ್ಲಿ ಡಿಕ್ರಿದಾರ ಹಾಜರಿದ್ದು ಆತ ತೋರಿಸಿದ ಚರಸ್ವತ್ತುಗಳನ್ನು ಜಪ್ತಿಮಾಡಿ ಅವುಗಳನ್ನು ಪರಿಶೀಲಿಸಿ ಅವುಗಳನ್ನು ಜಪ್ತಿ ಮಾಡಬೇಕು. ಜಪ್ತಿ ಮಾಡಿಕೊಳ್ಳಲಾದ ಚರಸ್ವತ್ತುಗಳನ್ನು ಸಾಗಿಸುವ ಅಥವಾ ಸಂರಕ್ಷಿಸಿ ಇಡುವ ಖರ್ಚನ್ನು ಡಿಕ್ರಿದಾರ ಭರಿಸಬೇಕಾಗುತ್ತದೆ.

ಜಪ್ತಿ ವಾರಂಟಿನ ಜೊತೆ ಚರಸ್ವತ್ತುಗಳ ಪಟ್ಟಿ ಇದ್ದಲ್ಲಿ ಅವುಗಳಲ್ಲಿ ನಮೂದಿಸಿದ ಚರಸ್ವತ್ತುಗಳು ಇದೆಯೇ ಎಂದು ಪರಿಶೀಲಿಸಿ, ಇದ್ದಲ್ಲಿ ಜಪ್ತಿ ಮಾಡಿ ಡಿಕ್ರೀದಾರನನ್ನು ಸಾಗಾಣಿಕೆ ಹಾಗು ಅಭಿರಕ್ಷೆಯಲ್ಲಿ ಇಡಲು ಬೇಕಾದ ಖರ್ಚನ್ನು ಭರಿಸುವಂತೆ ಕೇಳಬೇಕು. ಡಿಕ್ರಿದಾರ ಸ್ಥಳಕ್ಕೆ ಭಾರದೇ ಇದ್ದಲ್ಲಿ. ಇಲ್ಲ ಖರ್ಚನ್ನು ಭರಿಸಲು ಒಪ್ಪದೇ ಇದ್ದಲ್ಲಿ, ಸದರಿ ವಿಷಯಗಳನ್ನು ನಮೂದಿಸಿದ ವಿಸ್ತೃತ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ವಾರೆಂಟಿನ ಜೊತೆ ಚರಸ್ವತ್ತುಗಳ ಪಟ್ಟಿ ಇಲ್ಲ ಎಂದಾದಲ್ಲಿ ಮತ್ತು ಡಿಕ್ರಿದಾರ ಸ್ಥಳಕ್ಕೆ ಬಂದು ಚರಸ್ವತ್ತುಗಳನ್ನು ತೋರಿಸಿಲ್ಲ ಎಂದಾದಲ್ಲಿ ಸದರಿ ವಿಷಯಗಳನ್ನು ನಮೂದಿಸಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು.

ಚರಸ್ವತ್ತುಗಳ ಜಪ್ತಿ ಮತ್ತು ಸಾಗಾಟಕ್ಕೆ ತೊಂದರೆ ಉಂಟುಮಾಡಿದಲ್ಲಿ ಯಾವ ರೀತಿ ತೊಂದರೆ ಆಗಿದೆ ಎಂದು ನಮೂದಿಸಿ ವರದಿಯನ್ನು ನ್ಯಾಯಾಲಯಕ್ಕೆ

ಸಲ್ಲಿಸಬೇಕು. ಪೋಲಿಸ ಸಹಾಯ ಬೇಕಾಗಿದ್ದಲ್ಲಿ, ಅದನ್ನು ವರದಿಯಲ್ಲಿ ನಮೂದಿಸಬೇಕು. ಚರಸ್ವತ್ತುಗಳು ತಮಗೆ ಸೇರಿದ್ದು ಎಂದು ತೀರ್ಪುಋಣಿ ಬಿಟ್ಟು ಬೇರೆ ಯಾರಾದರೂ ಪ್ರತಿಪಾದಿಸಿದಲ್ಲಿ, ನ್ಯಾಯಾಲಯಕ್ಕೆ ಹಾಜರಾಗಿ ಅಲ್ಲಿ ಹೇಳುವಂತೆ ತಿಳಿಸಬೇಕು.

*****

# ವಿಷಯ ಸೂಚಿ: 6

## ಸ್ಥಿರಾಸ್ತಿಗಳನ್ನು ಜಪ್ತಿ ಮಾಡುವ ಮತ್ತು ಚರ ಹಾಗು ಸ್ಥಿರಾಸ್ತಿಗಳನ್ನು ಮಾರಾಟ ಮಾಡುವ ಬಗೆಗಿನ ಕಾನೂನು ಅಂಶಗಳು ಮತ್ತು ವಿಧಾನ

### ಚರ ಸ್ವತ್ತನ್ನು ಜಪ್ತಿ ಮಾಡುವ ವಿಧಾನ:

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21ರ ನಿಯಮ 54 ಸ್ಥಿರಸ್ವತ್ತುಗಳು ಯಾವ ರೀತಿ ಜಪ್ತಿ ಮಾಡಬೇಕು ಎಂಬುದನ್ನು ಹೇಳುತ್ತದೆ. ಸ್ಥಿರ ಸ್ವತ್ತುಗಳನ್ನು ಯಾವುದೇ ರೀತಿಯಲ್ಲಿ ವರ್ಗಾಯಿಸುವುದಕ್ಕೆ ಋಣಭಾರಕ್ಕೆ ಒಳಪಡಿಸುವುದಕ್ಕೆ ಮತ್ತು ಇತರರು ಪ್ರಯೋಜನವನ್ನು ಪಡೆಯುವುದರಿಂದ ನಿಷೇಧಿಸುವ ಆದೇಶ ಮಾಡುವ ಮೂಲಕ ಜಪ್ತು ಮಾಡಬೇಕು.

### ಜಪ್ತಿ ಆಧಾರದ ನಂತರ ತೀರ್ಪುಋಣಿ ಡಿಕ್ರಿ ಮೊತ್ತ ಮತ್ತು ಖರ್ಚನ್ನು ನೀಡಿದಲ್ಲಿ ಜಪ್ತಿ ಆದೇಶವನ್ನು ರದ್ದು ಮಾಡುವ ಅಧಿಕಾರ:

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 55, ಜಪ್ತಿ ನಂತರ ತೀರ್ಪುಋಣಿ ಹಣ ಸಂದಾಯ ಮಾಡಿದಲ್ಲಿ ಜಪ್ತಿ ಆದೇಶವನ್ನು ರದ್ದು ಮಾಡಬಹುದು ಎಂದು ಹೇಳುತ್ತದೆ. ಜಪ್ತಿ ಆದೇಶ ಎಲ್ಲಿಯವರೆಗೂ ಇರಬೇಕು ಎಂಬುದನ್ನು ಅಮಲ್ಜಾರಿ ಕೇಸನ್ನು ವಜಾ ಮಾಡುವ ಸಮಯದಲ್ಲಿ ಹೇಳಬೇಕು ಎಂದು ನಿಯಮ 57 ಹೇಳುತ್ತದೆ.

### ಜಪ್ತಿ ಮಾಡಿದ ಆಸ್ತಿಗಳ ಹಕ್ಕುಗಳು ಮತ್ತು ಮಾರಾಟಕ್ಕೆ ತಡೆ ನೀಡುವ ಅಧಿಕಾರ:

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 58 ಜಪ್ತಿಯಾದ ಸ್ವತ್ತಿನ ಹಕ್ಕುಗಳು ಅಥವಾ ಅಕ್ಷೇಪಣೆಗಳ ಬಗ್ಗೆ ನ್ಯಾಯಾಲಯ ತೀರ್ಮಾನಿಸಬೇಕು ಎಂದು ಹೇಳುತ್ತದೆ. ನಿಯಮ 59 ಮಾರಾಟಕ್ಕೆ ತಡೆ ನೀಡುವ ಅವಕಾಶವನ್ನು ಹೊರಡಿಸುವ ಅಧಿಕಾರದ ಬಗ್ಗೆ ಹೇಳುತ್ತದೆ.

ಅಮಲ್ಜಾರಿ ಅರ್ಜಿ ಯಾವುದಾದರು ಕಾರಣಕ್ಕೆ ವಜಾಗೊಂಡಾಗ, ನ್ಯಾಯಾಲಯ ಜಪ್ತಿವಾರೆಂಟ್ ರದ್ದಾಗಿದೆಯೇ, ಇಲ್ಲದಿದ್ದಲ್ಲಿ ಎಲ್ಲಿಯ ತನಕ ಜಪ್ತಿ ಆದೇಶ ಚಾಲ್ತಿಯಲ್ಲಿ ಇರಬೇಕು ಎಂಬುದನ್ನು ಹೇಳಬೇಕು ಎಂದು ನಿಯಮ 57 ಹೇಳುತ್ತದೆ.

**ಜಪ್ತಿಯಾದ ಸ್ವತ್ತುಗಳ ಮಾರಾಟ ಮತ್ತು ಮಾರಾಟದಿಂದ ಬಂದ ಹಣವನ್ನುವಿತರಿಸುವ ವಿಧಾನ:**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 64 ಜಪ್ತಿಯಾದ ಸ್ವತ್ತನ್ನು ಮಾರಾಟ ಮಾಡಬೇಕು ಅಥವಾ ಉತ್ಪತ್ತಿಯನ್ನು ಹಕ್ಕುದಾರನಾದ ವ್ಯಕ್ತಿಗೆ ಸಂದಾಯ ಮಾಡಬೇಕು ಎಂಬ ಆದೇಶವನ್ನು ಹೊರಡಿಸುವ ಅಧಿಕಾರದ ಬಗ್ಗೆ ಹೇಳುತ್ತದೆ. ಮಾರಾಟವನ್ನು ಯಾರು ಮತ್ತು ಹೇಗೆ ಮಾಡಬೇಕು ಎಂಬುದರ ಬಗ್ಗೆ ನಿಯಮ 65 ಹೇಳುತ್ತದೆ. ಇದರ ಪ್ರಕಾರ ಮಾರಾಟವನ್ನು ನ್ಯಾಯಾಲಯದ ಒಬ್ಬ ಅಧಿಕಾರ ಅಥವಾ ನ್ಯಾಯಾಲಯದಿಂದ ನೇಮಕಗೊಂಡ ವ್ಯಕ್ತಿ ನಿಯಮದ ಪ್ರಕಾರ ಬಹಿರಂಗ ಹರಾಜಿನ ಮೂಲಕ ನಡೆಸಬೇಕು.

**ಸ್ವತ್ತನ್ನು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡುವ ವಿಧಾನ:**

ಆಸ್ತಿಯನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಬೇಕು ಎಂಬುದನ್ನು ಪ್ರಚುರ ಪಡಿಸುವ ಬಗ್ಗೆಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 66 ಹೇಳುತ್ತದೆ. ಇದರ ಪ್ರಕಾರ ನ್ಯಾಯಾಲಯದ ಭಾಷೆಯಲ್ಲಿ ಮಾರಾಟದ ಬಗೆಗಿನ ಉದ್ಘೋಷಣೆಯನ್ನು ತಯಾರಿಸಬೇಕು. ತೀರ್ಪುಋಣಿಗೆ ನೋಟಿಸ್ ಕೊಟ್ಟ ನಂತರ ಉದ್ಘೋಷಣೆಯನ್ನು ಬರೆಯತಕ್ಕದು ಮತ್ತು ಮಾರಾಟ ಮಾಡುವ ದಿನಾಂಕ ಸಮಯ ಹಾಗೂ ಸ್ಥಳವನ್ನು ನಿಗದಿ ಪಡಿಸಬೇಕು.

ಆಸ್ತಿಯನ್ನು ಮಾರಾಟ ಮಾಡಲು ಉದ್ದೇಶಿಸಿದ ವ್ಯಕ್ತಿ, ಅರ್ಜಿಯ ಜೊತೆ, ತೀರ್ಪುಋಣಿಗೆ ಸದರಿ ಆಸ್ತಿಯಲ್ಲಿ ಇರುವ ಹಕ್ಕು ಮತ್ತು ಇತರ ಯಾವುದೇ ವ್ಯಕ್ತಿಗಳಿಗೆ ಹಕ್ಕಿದೆಯೇ ಎಂಬುದನ್ನು ನಮೂದಿಸಿ ಸತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು ಎಂದು ಕರ್ನಾಟಕ ಸಿವಿಲ್ ವ್ಯವಹಾರ ನಿಯಮ 129ರಲ್ಲಿ ಹೇಳಿದೆ. ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರು ಪಡಿಸುವಂತೆ ನಿರ್ದೇಶಿಸುವ ಅಧಿಕಾರ ನ್ಯಾಯಾಲಯಕ್ಕೆ ಇದೆ. ಅದರಂತೆ ಮಾರಾಟದ ಆಸ್ತಿಗೆ ಸಂಬಂಧಿಸಿದ ಟೈಟಲ್

ಡೀಡನ್ನು ಹಾಜರು ಪಡಿಸುವಂತೆ ನಿರ್ದೇಶಿಸುವ ಆಧಿಕಾರವನ್ನು ನಿಯಮ 130 ರಲ್ಲಿ ನೀಡಿದೆ.

**<u>ಮಾರಾಟಕ ಉದ್ಘೋಷಣೆಯನ್ನುತಯಾರಿಸುವ ಮತ್ತು ಅದನ್ನು ಘೋಷಿಸುವ ರೀತಿ:</u>**

ಮಾರಾಟ ಉದ್ಘೋಷಣೆಯನ್ನು ತಯಾರಿಸುವ ಮತ್ತು ಘೋಷಣೆಯ ಬಗ್ಗೆ ಅನುಸರಿಸಬೇಕಾದ ಕ್ರಮಗಳು ಕರ್ನಾಟಕ ಸಿವಿಲ್ ವ್ಯವಹಾರ ನಿಯಮ 129 ರಿಂದ 136 ರಲ್ಲಿ ಹೇಳಿದೆ.

ಮಾರಾಟ ಉದ್ಘೋಷಣೆಯನ್ನು ಅಪೆಂಡಿಕ್ಸ್ 'ಇ' ಯ ನಮೂನೆ 20 ರಂತೆ ತಯಾರಿಸಬೇಕು. ಮಾರಾಟ ಉದ್ಘೋಷಣೆಯನ್ನು ತಯಾರಿಸುವ ಪೂರ್ವದಲ್ಲಿ ಅಪೆಂಡಿಕ್ಸ್ 'ಇ' ಯ ನಮೂನೆ 28 ರಂತೆ ತೀರ್ಪುಋಣಿಗೆ ನೋಟೀಸನ್ನು ನೀಡಬೇಕು ಎಂದು ಕ್ರಮಾದೇಶ 21 ನಿಯಮ 54 ರಲ್ಲಿ ಹೇಳಿದೆ. ಮಾರಾಟ ಉದ್ಘೋಷಣೆ ಪತ್ರದಲ್ಲಿ ಯಾವ ಆಸ್ತಿಯನ್ನು ಭಾಗಶ: ಇಲ್ಲ ಪೂರ್ತಿಯಾಗಿ ಮಾರಾಟ ಮಾಡಲಾಗುತ್ತದೆಯೇ, ಅದರ ಕಂದಾಯ ವೆಚ್ಚ, ಋಣಭಾರಕ್ಕೆ ಒಳಪಟ್ಟಿದೆಯೇ ಎಷ್ಟು ಡಿಕ್ರಿ ಮೊತ್ತಕ್ಕಾಗಿ ಪತ್ರವನ್ನು ಮಾರಾಟ ಮಾಡಲಾಗುತ್ತಿದೆ ಮತ್ತು ನ್ಯಾಯಾಲಯಕ್ಕೆ ಬೇಕು ಎನಿಸುವ ಇತರ ವಿವರಗಳನ್ನು ನಮೂದಿಸ ಬೇಕು.

ಉದ್ಘೋಷಣೆಯಲ್ಲಿ ಸ್ಥಳ, ಮಾರಾಟ ಮತ್ತು ನ್ಯಾಯಾಲಯದ ಹರಾಜಿನ ದಿನಾಂಕಗಳನ್ನು ನಮೂದಿಸಬೇಕು. ಕೆಲವೊಂದು ಸಮಯದಲ್ಲಿ ಮಾರಾಟ ಪ್ರಕ್ರಿಯೆಯನ್ನು ನ್ಯಾಯಾಲಯದಲ್ಲಿ ಮಾತ್ರ ನಡೆಸುವಂತೆ ಆದೇಶಿಸಬಹುದು ಎಂದು ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 139 ರಲ್ಲಿ ಹೇಳಿದೆ.

ಉದ್ಘೋಷಣೆಯಲ್ಲಿ ಅಡಕಗೊಂಡಿರಬೇಕಾದ ವಿಷಯಗಳ ಬಗ್ಗೆ ಮತ್ತು ಅದನ್ನು ಯಾವ ರೀತಿ ತಯಾರಿಸಬೇಕು ಎಂಬುದರ ಬಗ್ಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 66 ರಲ್ಲಿ ಹೇಳಲಾಗಿದೆ. ಉದ್ಘೋಷಣೆಯನ್ನು ಯಾವ ರೀತಿ ಪ್ರಚುರ ಪಡಿಸಬೇಕು ಎಂಬುದನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 67 ಮತ್ತು ಕರ್ನಾಟಕ ಸಿವಿಲ್ ವ್ಯವಹಾರ ನಿಯಮ 131 ರಿಂದ 137 ರಲ್ಲಿ ಹೇಳಿದೆ. ಉದ್ಘೋಷಣೆಯನ್ನು ಡಂಗೂರ ಸಾರುವ ಮೂಲಕ ಅಥವಾ ರೂಢಿಗತ ವಿಧಾನ ಸ್ವತ್ತಿನಲ್ಲಿ ಕಾಣುವ ಜಾಗ, ಇಲ್ಲ

ಗ್ರಾಮ ಪಂಚಾಯಿತಿ, ಕಛೇರಿ ಅಥವಾ ಮುನ್ಸಿಪಾಲಿಟಿ ಕಛೇರಿಯ ನೋಟಿಸ್ ಬೋರ್ಡಿನಲ್ಲಿ ಅಂಟಿಸುವ ಮೂಲಕ ಪ್ರಚುರಪಡಿಸಬೇಕು. ನ್ಯಾಯಾಲಯ ಮಾರಾಟದ ಉದ್ಘೋಷಣೆಯನ್ನು ರಾಜ್ಯಪತ್ರ ಅಥವಾ ಸ್ಥಳೀಯ ವೃತ್ತ ಪತ್ರಿಕೆಯಲ್ಲಿ ಪ್ರಕಟಗೊಳಿಸಬೇಕು ಎಂದು ಆದೇಶಿಸಬಹುದು. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 54 ರಂತೆ ನೋಟೀಸ ನೀಡಿದ್ದಲ್ಲಿ, ತೀರ್ಪುಋಣಿಗೆ ಪುನ: ನೋಟೀಸ್ ನೀಡುವ ಅವಶ್ಯಕತೆ ಇರುವುದಿಲ್ಲ.

## <u>ಬಹಿರಂಗ ಹರಾಜಿನಲ್ಲಿ ಸ್ವತ್ತನ್ನು ಮಾರಾಟ ಮಾಡುವ ವಿಧಾನ</u>

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 68 ರ ಪ್ರಕಾರ ಮಾರಾಟದ ಘೋಷಣೆಯನ್ನು ಪ್ರಚುರಪಡಿಸುವ ದಿನಾಂಕದಿಂದ ಸ್ಥಿರ ಸ್ವತ್ತಾಗಿದ್ದಲ್ಲಿ, 15 ದಿನಗಳ ಒಳಗೆ ಮತ್ತು ಚರಸ್ವತ್ತಾಗಿದ್ದಲ್ಲಿ 7 ದಿನಗಳ ಒಳಗೆ ಮಾರಾಟ ಮಾಡುವ ದಿನಾಂಕವನ್ನು ನಿಗದಿಪಡಿಸಬೇಕು. ಈ ಅವಧಿಯ ನಂತರ ಮಾರಾಟ ಮಾಡುವುದಾಗಿದ್ದಲ್ಲಿ ತೀರ್ಪುಋಣಿಯ ಲಿಖಿತ ಅನುಮತಿ ಬೇಕು. ಕರ್ನಾಟಕ ಸಿವಿಲ್ ನಡವಳಿಕೆ ನಿಯಮ 137 ರಿಂದ 140 ಸ್ವತ್ತುಗಳ ಮಾರಾಟ ಹೇಗೆ ಮಾಡಬೇಕು ಎಂಬುದನ್ನು ಹೇಳುತ್ತದೆ. ನಿಯಮ 137 ಚರ ಮತ್ತು ಸ್ಥಿರ ಸ್ವತ್ತುಗಳನ್ನು ಒಂದೇ ಸಲ ಮಾರಾಟ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳುತ್ತದೆ. ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 138 ಸಮಾನ್ಯವಾಗಿ ಸ್ಥಿರಸ್ವತ್ತಿನ ಮಾರಾಟವನ್ನು ಸ್ಥಿರಸ್ವತ್ತು ಇರುವಲ್ಲಿ ಮಾಡಿ ಅಂತಿಮ ಬಿಡ್ಡನ್ನು ನ್ಯಾಯಾಲಯದಲ್ಲಿ ನ್ಯಾಯಾಧೀಶರ ಸಮ್ಮುಖದಲ್ಲಿ ಮಾಡಲಾಗುತ್ತೆದೆ ಎಂಬ ಷರತ್ತಿನಲ್ಲಿ ಮಾರಾಟ ಮಾಡಬೇಕು ಎಂದು ಹೇಳುತ್ತದೆ. ಮಾರಾಟದ ಉದ್ಘೋಷಣೆ ಪತ್ರದಲ್ಲಿ ಸ್ಥಳದಲ್ಲಿ ಮಾರಾಟ ಮಾಡುವ ದಿನಾಂಕ ಮತ್ತು ನ್ಯಾಯಾಲಯದಲ್ಲಿ ಆಗುವ ಅಂತಿಮ ಬಿಡ್ಡಿನ ದಿನಾಂಕವನ್ನು ನಮೂದಿಸಬೇಕು ಎಂದು ನಿಯಮ 139 ರಲ್ಲಿ ಹೇಳಿದೆ.

ಪಕ್ಷಗಾರರ ಕೋರಿಕೆ ಮೇರೆಗೆ ಅಥವಾ ಬೇರೆ ಸಕಾರಣಕ್ಕಾಗಿ ಲಿಖಿತ ಅದೇಶವನ್ನು ಮಾಡಿ. ಮಾರಾಟ ಪ್ರಕ್ರಿಯೆಯನ್ನು ನ್ಯಾಯಾಲಯದಲ್ಲಿ ಮಾಡಬೇಕು ಎಂದು ಆದೇಶಿಸುವ ಅಧಿಕಾರ ಕೆಲವೊಂದು ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಇದೆ ನಿಯಮ 139 ರಲ್ಲಿ ಹೇಳಿದೆ.

**<u>ನಿಗದಿ ಪಡಿಸಿದ ದಿನದಂದು ಮಾರಾಟ ಪ್ರಕ್ರಿಯೆಯನ್ನು ನಡೆಸಲು ಆಗದಿದ್ದ ಪಕ್ಷದಲ್ಲಿ ಕೈಗೊಳ್ಳಬೇಕಾದ ಕ್ರಮ:</u>**

ಒಂದು ವೇಳೆ ಮಾರಾಟ ನಿಗದಿಪಡಿಸಿದ ದಿನಾಂಕದಂದು ನಡೆಯದೇ ಇದ್ದಲ್ಲಿ ಪುನಃ ಮಾರಾಟದ ಉದ್ಘಾಷಣೆಯನ್ನು ಹೊರಡಿಸುವ ಅಗತ್ಯವಿಲ್ಲ ಎಂದು ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 140 ರಲ್ಲಿ ಹೇಳಿದೆ ಮತ್ತು ನ್ಯಾಯಾಲಯವು ನೋಟೀಸ್ ಬೋರ್ಡಿನಲ್ಲಿ ಮುಂದಿನ ದಿನಾಂಕ ಮತ್ತು ಸಮಯವನ್ನು ಪ್ರಚುರ ಪಡಿಸುವ ಮೂಲಕ ಮತ್ತು ಸ್ಥಳದಲ್ಲಿ ಮಾರಾಟ ಮುಂದೂಡಿಕೆ ಆಗಿದ್ದಲ್ಲಿ, ಮುಂದಿನ ದಿನಾಂಕ ಮತ್ತು ಸಮಯವನ್ನು ನಮೂದಿಸಿ ನೋಟೀಸನ್ನು ಸ್ಥಳದಲ್ಲಿ ಅಂಟಿಸುವ ಮೂಲಕ, ಚರಸ್ವತ್ತು ಆಗಿದ್ದಲ್ಲಿ, ಅದರ ಮೇಲೆ ಅಂಟಿಸುವ ಮೂಲಕ ಪ್ರಚುರ ಪಡಿಸಬೇಕು ಎಂದು ನಿಯಮ 140 ರಲ್ಲಿ ಹೇಳಿದೆ.

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 141 ಕೆಲವೊಂದು ಸಂದರ್ಭಗಳಲ್ಲಿ ಚರಸ್ವತುಗಳನ್ನು ಕೂಡಲೇ ಮಾರಾಟ ಮಾಡುವಂತೆ ಅದೇಶಿಸಬಹುದು ಎಂದು ಹೇಳುತ್ತದೆ.

**<u>ಮಾರಾಟ ಪ್ರಕ್ರಿಯೆಯನ್ನು ಮುಂದೂಡುವ ಇಲ್ಲ ನಿಲ್ಲಿಸಲು ಆದೇಶಿಸುವ ಅಧಿಕಾರ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 69 ಪ್ರಕಾರ ಮಾರಾಟವನ್ನು ನಿಲ್ಲಿಸುವ ಅಥವಾ ಮುಂದೂಡುವ ಅಧಿಕಾರ ನ್ಯಾಯಾಲಯಕ್ಕೆ ಇದೆ. ಅದೇ ರೀತಿ ಕಾರಣವನ್ನು ನಮೂದಿಸಿ ಮಾರಾಟವನ್ನು ನಿಲ್ಲಿಸುವ, ಅಥವಾ ಮುಂದೂಡುವ ಅಧಿಕಾರ ಬೇಲಿಫ್‌ಗೆ ಕೂಡ ಇದೆ ಎಂದು ಹೇಳುತ್ತದೆ. ಆದರೆ ನ್ಯಾಯಾಲಯ ಅಥವಾ ನ್ಯಾಯಾಲಯದ ಆವರಣದಲ್ಲಿ ಮಾರಾಟ ಪ್ರಕ್ರಿಯೆ ನಡೆದಿದ್ದಲ್ಲಿ ನ್ಯಾಯಾಲಯದ ಅನುಮತಿ ಇಲ್ಲದೆ ಮಾರಾಟವನ್ನು ನಿಲ್ಲಿಸುವ ಅಧಿಕಾರ ಬೇಲಿಫ್ ಗೆ ಇಲ್ಲ.

**<u>30 ದಿನಕ್ಕಿಂತ ಹೆಚ್ಚಿನ ಅವಧಿಗೆ ಮಾರಾಟವನ್ನು ಮುಂದೂಡಿದಾಗ ಕೈಗೊಳ್ಳಬೇಕಾದ ಕ್ರಮ:</u>**

ಮಾರಾಟವನ್ನು 30 ದಿನಕ್ಕಿಂತ ಹೆಚ್ಚಿನ ದಿನಗಳಿಗೆ ಮುಂದೂಡಿದ್ದಲ್ಲಿ ಹೊಸದಾಗಿ ಉದ್ಘೋಷಣೆ ಹೊರಡಿಸಬೇಕು. ತೀರ್ಪುಋಣಿ ಉದ್ಘೋಷಣೆ ಅವಶ್ಯಕತೆ ಇಲ್ಲ ಎಂದು ಹೇಳಿದ್ದಲ್ಲಿ ಮಾತ್ರ ಉದ್ಘೋಷಣೆ ಹೊರಡಿಸುವ ಅವಶ್ಯಕತೆ ಇರುವುದಿಲ್ಲ. ಮಾರಾಟ ಪ್ರಕ್ರಿಯೆಯನ್ನು ಕೊನೆಗೊಳಿಸುವುದಕ್ಕಿಂತ ಮೊದಲು ಡಿಕ್ರಿಯ ಮೊತ್ತ ಮತ್ತು ಖರ್ಚನ್ನು ಬೇಲೀಫ್‌ಗೆ ಕೊಟ್ಟಲ್ಲಿ ಮಾತ್ರ ಮಾರಾಟವನ್ನು ನಿಲ್ಲಿಸಬೇಕು.

ಕರ್ನಾಟಕ ಸಿವಿಲ್ ನಡವಳಿಕೆ ನಿಯಮಗಳ ನಿಯಮ 148 ಪ್ರತಿ ವಾರದ ಒಂದು ದಿನವನ್ನು ಡಿಕ್ರಿಯ ಮಾರಾಟ ಪ್ರಕ್ರಿಯೆಗಾಗಿ ನಿಗದಿಪಡಿಸಬೇಕು. ನಿಗದಿ ಪಡಿಸಿದ ದಿನವನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ನೋಟೀಸ್ ಬೋರ್ಡ್ ನಲ್ಲಿ ಪ್ರಚುರ ಪಡಿಸಬೇಕು. ಮಾರಾಟ ಪ್ರಕ್ರಿಯೆಯನ್ನು ರಜಾ ದಿನಗಳಲ್ಲಿ ಮಾಡುವಂತಿಲ್ಲ.

**<u>ಖರೀದಿದಾರನ ತಪ್ಪಿನಿಂದ ಮಾರಾಟ ಪ್ರಕ್ರಿಯೆ ಆಗದೇ ಪುನ: ಮಾರಾಟ ಪ್ರಕ್ರಿಯೆ ನಡೆಸಬಾರದಲ್ಲಿ, ಖರೀದಿದಾರ ಮಾರಾಟದ ಖರ್ಚನ್ನು ಭರಿಸಬೇಕು:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 71 ಖರೀದಿದಾರನ ತಪ್ಪಿನಿಂದ ಮಾರಾಟ ಆಗದೇ ಇದ್ದ ಪಕ್ಷದಲ್ಲಿ, ಸದರೀ ನಷ್ಟಕ್ಕೆ ಖರೀದಿದಾರನೇ ಜವಾಬ್ದಾರಿ ಎಂದು ಹೇಳುತ್ತದೆ.

**<u>ಡಿಕ್ರಿದಾರ ಇಲ್ಲ ಅಡಮಾನದಾರ ಹರಾಜಿನಲ್ಲಿ ಭಾಗವಹಿಸಬಾರದಲ್ಲಿ ನ್ಯಾಯಾಲಯದ ಅನುವತಿ ಪಡೆಯಬೇಕು:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 72 ಡಿಕ್ರೀದಾರನು ಹರಾಜಿನಲ್ಲಿ ಭಾಗವಹಿಸುತಕ್ಕದ್ದಲ್ಲ ಮತ್ತು ಖರೀದಿ ಮಾಡತಕ್ಕದಲ್ಲ ಎಂದು ಹೇಳುತ್ತದೆ. ಡಿಕ್ರಿ ದಾರ ಖರೀದಿ ಮಾಡಬೇಕಾದಲ್ಲಿ ನಿಯಮ 73 ರಂತೆ ನ್ಯಾಯಾಲಯದ ಅನುಮತಿಯನ್ನು ಪಡೆದುಕೊಳ್ಳಬೇಕು. ಅಡಮಾನದಾರ ಕೂಡ ನ್ಯಾಯಲಯದ ಅನುಮತಿ ಇಲ್ಲದೆ ಹರಾಜನಲ್ಲಿ ಬಾಗವಹಿಸಬಾರದು ಎಂದು ನಿಯಮ 72 ಎ ಹೇಳುತ್ತದೆ. ನ್ಯಾಯಲಯದ ಅಧಿಕಾರಗಳು ಕೂಡ ಬಹಿರಂಗ ಹರಾಜಿನಲ್ಲಿ ನೇರವಾಗಿ ಇಲ್ಲ ಪರೋಕ್ಷವಾಗಿ ಬಾಗವಹಿಸ ಬಾರದು ಎಂದು ನಿಯಮ 73 ಹೇಳುತ್ತದೆ.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 82 ಲಘು ವ್ಯವಹಾರಗಳ ನ್ಯಾಯಾಲಯ ವಲ್ಲದ ಇತರ ನ್ಯಾಯಾಲಯಗಳು ಸ್ಥಿರ ಸ್ವತ್ತುಗಳ ಮಾರಾಟಕ್ಕೆ ಆದೇಶಿಸಬಹುದು ಎಂದು ಹೇಳುತ್ತದೆ. ತೀರ್ಪಋಣಿಗೆ ಡಿಕ್ರಿ ಹಣವನ್ನು ಹೊಂದಿಸಲು ಸಮಯ ನೀಡುವ ಸಲುವಾಗಿ ಮಾರಾಟವನ್ನು ಮುಂದೂಡುವ ಅಧಿಕಾರವನ್ನು ನ್ಯಾಯಾಲಯಕ್ಕೆ ಕ್ರಮಾದೇಶ 21 ರ ನಿಯಮ 83 ನೀಡುತ್ತದೆ.

**<u>ಖರೀದಿದಾರ ಕ್ರಯದ ಮೊತ್ತವನ್ನು ಜಮಾ ಮಾಡಲು ವಿಫಲನಾದಾಗ ಕೈಗೊಳ್ಳಬೇಕಾದ ಕ್ರಮ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 84 ಮಾರಾಟ ಹಣವನ್ನು ಜಮಾ ಮಾಡುವ ಮತ್ತು ಜಮಾ ಮಾಡುವಲ್ಲಿ ವಿಫಲನಾದಾಗ ಮರು ಮಾರಾಟ ಮಾಡುವ ಬಗ್ಗೆ ಹೇಳುತ್ತದೆ. ಹರಾಜಿನ ಪ್ರಕ್ರಿಯೆಯಲ್ಲಿ ಖರೀದಿದಾರನೆಂದು ಘೋಷಿಸಿದ ವ್ಯಕ್ತಿ 25 ಪ್ರತಿಶತ ಹಣವನ್ನು ಕೂಡಲೇ ಕಟ್ಟತಕ್ಕದ್ದು ತಪ್ಪಿದ್ದಲ್ಲಿ ಕೂಡಲೇ ಮರು ಮಾರಾಟ ಪ್ರಕ್ರಿಯೆಯನ್ನು ನಡೆಸಬೇಕು. ಡಿಕ್ರಿದಾರ ಖರೀದಿದಾರ ಆಗಿದ್ದಲ್ಲಿ ಡಿಕ್ರಿ ಮೊತ್ತವನ್ನು ಕಟ್ಟುವ ಹಣಕ್ಕೆ ವಜಾವಟ್ಟು ಮಾಡಿಕೊಳ್ಳಲು ಅವಕಾಶ ಇದೆ. ನ್ಯಾಯಾಲಯದಲ್ಲಿ ಹರಾಜು ಪ್ರಕ್ರಿಯೆ ಅದನಂತರ 25% ಖರೀದಿ ಮೊತ್ತವನ್ನು ಕಟ್ಟಬೇಕು, ಸ್ಥಳದಲ್ಲಿ ಹರಾಜು ಪ್ರಕ್ರಿಯೆ ಆದಾಗ ಅಲ್ಲ.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 85 ರ ಪ್ರಕಾರ ಉಳಿಕೆ 75 ಪ್ರತಿಶತ ಹಣವನ್ನು 15 ದಿನದ ಒಳಗೆ ಖರೀದಿದಾರ ಕಟ್ಟಬೇಕು ಎಂದು ಹೇಳುತ್ತದೆ. ಡಿಕ್ರಿದಾರ ಖರೀದಿದಾರನಾಗಿದ್ದಲ್ಲಿ, ಡಿಕ್ರಿ ಮೊತ್ತವನ್ನು ಜಮಾ ಮಾಡಿಕೊಳ್ಳಬಹುದು.

ಖರೀದಿದಾರ ಮೊತ್ತವನ್ನು ಕಟ್ಟಲು ವಿಫಲನಾದಲ್ಲಿ ಮಾರಾಟ ಪ್ರಕ್ರಿಯೆ ಖರ್ಚನ್ನು ಜಮಾ ಮಾಡಿದ ಮೊತ್ತದಿಂದ ಪಡೆದುಕೊಂಡು, ಆಸ್ತಿಯನ್ನು ಪುನಃ ಮಾರಾಟ ಮಾಡಬೇಕು. ಎಂದು ಕ್ರಮಾದೇಶ 21 ರ ನಿಯಮ 86 ಹೇಳುತ್ತದೆ. ಹಾಗೆ ಮರುಮಾರಾಟ ಮಾಡುವುದಕ್ಕಿಂತ ಮೊದಲು ಹೊಸದಾಗಿ ಉದ್ಘೋಷಣೆಯನ್ನು ಹೊರಡಿಸಬೇಕು ಎಂದು ನಿಯಮ 87 ಹೇಳುತ್ತದೆ. ಕ್ರಮಾದೇಶ 21ರ ನಿಯಮ 88 ರ ಪ್ರಕಾರ, ಹರಾಜಿನ ಮೂಲಕ ಸ್ಥಿರಾಸ್ತಿಯನ್ನು ಮಾರಾಟ ಮಾಡುವಾಗ ಹಿಸ್ಸೆದಾರನಿಗೆ ಅಧ್ಯತೆ ನೀಡಬೇಕು ಎಂದು ಹೇಳುತ್ತದೆ.

**<u>ಡಿಕ್ರಿ ಹಣ ಮತ್ತು ಖರ್ಚಿನ ಮೊತ್ತವನ್ನು ನ್ಯಾಯಾಲಯಕ್ಕೆ ಠೇವಣಿ ಇಟ್ಟು ಮಾರಾಟವನ್ನು ತಳ್ಳಿಹಾಕುವಂತೆ ಕೇಳುವ ಅಧಿಕಾರ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 89 ತೀರ್ಪುಋಣಿ ಡಿಕ್ರಿ ಮೊತ್ತ ಮತ್ತು ಖರೀದಿ ಮೊತ್ತದ 5% ಹಣವನ್ನು ಖರೀದಿದಾರನಿಗೆ ಕೊಡಲು, ಮಾರಾಟ ಪ್ರಕ್ರಿಯೆಯನ್ನು ಅನುರ್ಜಿತಗೊಳಿಸುವಂತೆ ಕೇಳಿಕೊಳ್ಳುವ ಅಧಿಕಾರವನ್ನು ನೀಡಿದೆ. ಕ್ರಮಾದೇಶ 21 ರ ನಿಯಮ 90 ಮೋಸ ಮತ್ತು ದೋಷಪೂರಿತ ಮಾರಾಟ ಪ್ರಕ್ರಿಯೆಯನ್ನು ತಳ್ಳಿಹಾಕಲು ಅರ್ಜಿ ಸಲ್ಲಿಸುವ ಅಧಿಕಾರವನ್ನು ನೀಡಿದೆ.

**<u>ಹರಾಜಿನಲ್ಲಿ ಮಾರಾಟ ಆದ ಸ್ವತ್ತಿನಲ್ಲಿ ತೀರ್ಪುಋಣಿಗೆ ಹಕ್ಕು ಇಲ್ಲ ಕಂಡುಬಂದಲ್ಲಿ ಮಾರಾಟವನ್ನು ತಳ್ಳಿ ಹಾಕುವಂತೆ ಅರ್ಜಿ ಸಲ್ಲಿಸುವ ಅಧಿಕಾರ:</u>**

ತೀರ್ಪುಋಣಿಗೆ ಮಾರಾಟವಾದ ಆಸ್ತಿಯಲ್ಲಿ ಮಾಲೀಕತ್ವದ ಹಕ್ಕು ಇಲ್ಲದಿದ್ದಲ್ಲಿ ಮಾರಾಟ ಪ್ರಕ್ರಿಯೆಯನ್ನು ತಳ್ಳಿಹಾಕುವಂತೆ ಕೋರಿ ಅರ್ಜಿಯನ್ನು ಸಲ್ಲಿಸುವ ಅಧಿಕಾರವನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 91 ರಲ್ಲಿ ಖರೀದಿದಾರನಿಗೆ ನೀಡಿದೆ. ಮೇಲೆ ಹೇಳಿದ ನಿಯಮಗಳಂತೆ ಖರೀದಿಯನ್ನು ತಳ್ಳಿಹಾಕಲು ಅರ್ಜಿಯನ್ನು ಸಲ್ಲಿಸದೆ, ಅಥವಾ ಹಾಗೆ ಸಲ್ಲಿಸಿದ ಅರ್ಜಿ ವಜಾಗೊಂಡ ನಂತರ ನ್ಯಾಯಾಲಯ ಕ್ರಯ ಆಗಿದೆ ಎಂದು ನ್ಯಾಯಾಲಯ ಘೋಷಿಸಬೇಕು ಎಂದು ಕ್ರಮಾದೇಶ 21 ರ ನಿಯಮ 92 ಹೇಳುತ್ತದೆ.

ಮಾರಾಟ ಪ್ರಕ್ರಿಯೆ ತಳ್ಳಿಹಾಕಿದಾಗ ಜಮಾ ಮಾಡಿದ ಮೊತ್ತವನ್ನು ಖರೀದಿದಾರನಿಗೆ ಕೊಡಬೇಕು ಎಂದು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 93 ಹೇಳುತ್ತದೆ.

**<u>ಕ್ರಯ ಪಕ್ಕಾ ಆದ ನಂತರ ಸೇಲ್ ಸರ್ಟಿಫಿಕೇಟ್ ಕೊಡುವ ವಿಧಾನ:</u>**

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 93 ಕ್ರಯ ಪಕ್ಕ ಆದ ನಂತರ ಸೇಲ್ ಸರ್ಟಿಫಿಕೇಟನ್ನು ನೀಡಬೇಕು ಎಂದು ಹೇಳುತ್ತದೆ. ಕರ್ನಾಟಕ ಸಿವಿಲ್ ನಡವಳಿಕೆ ನಿಯಮ 152. ಸೇಲ್ ಸರ್ಟಿಫಿಕೇಟನ್ನು ನೀಡುವುದಕ್ಕಿಂತ

ಮೊದಲು ಸ್ಟಾಂಪ್ ಶುಲ್ಕವನ್ನು ಪಡೆದುಕೊಳ್ಳಬೇಕು. ಮತ್ತು ಸೇಲ್ ಸರ್ಟಿಫಿಕೇಟ್‌ನ ಪ್ರತಿಯನ್ನು ನೋಂದಣಿ ಕಚೇರಿಗೆ ಕಳುಹಿಸಬೇಕು ಎಂದು ಹೇಳುತ್ತದೆ.

**ಖರೀದಿಸಿದ ಸ್ವತ್ತಿನ ಸ್ವಾಧಿನತೆಯನ್ನು ಖರೀದಿದಾರ ಪಡೆಯಲು ಇರುವ ವಿಧಾನ:**

ಸೇಲ್ ಸರ್ಟಿಫಿಕೇಟ್ ನೀಡಿದ ನಂತರ ಸ್ಥಿರ ಸ್ವತ್ತಿನ ಸ್ವಾಧೀನತೆಯನ್ನು ಹೇಗೆ ನೀಡಬೇಕು ಎಂಬುದನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ರ ನಿಯಮ 95 ರಲ್ಲಿ ಹೇಳುತ್ತದೆ. ಸ್ಥಿರಾಸ್ತಿ ತೀರ್ಪುಋಣಿಯ ಸ್ವಾಧೀನತೆಯಲ್ಲಿ ಖರೀದಿದಾರ ಅರ್ಜಿಯನ್ನು ಸಲ್ಲಿಸಿದ ಪಕ್ಷದಲ್ಲಿ ಸ್ಥಿರ ಆಸ್ತಿಯ ಸ್ವಾಧಿನತೆಯನ್ನು ಖರೀದಿದಾರನಿಗೆ ನೀಡಬೇಕು ಎಂದು ಕ್ರಮಾದೇಶ 21 ರ ನಿಯಮ 95 ಹೇಳುತ್ತದೆ.

ಬಹಿರಂಗ ಹರಾಜಿನಲ್ಲಿ ಖರೀದಿಸಿದ ಆಸ್ತಿ ಬಾಡಿಗೆದಾರನ ಸ್ವಾಧೀನತೆಯಲ್ಲಿ ಇದ್ದಲ್ಲಿ. ಖರೀದಿದಾರ ಸ್ವಾಧೀನತೆ ಕೋರಿ ಅರ್ಜಿಯನ್ನು ಸಲ್ಲಿಸಿದಾಗ, ಸೇಲ್ ಸರ್ಟಿಫಿಕೇಟ್‌ನ ಪ್ರತಿಯನ್ನು ಸ್ವತ್ತಿನ ಕಾಣುವ ಜಾಗದಲ್ಲಿ ಅಂಟಿಸುವ ಮೂಲಕ, ಮತ್ತು ಡ್ರಮ್ ಬೀಟ್ ಮೂಲಕ ಸ್ಥಿರಾಸ್ತಿಯಲ್ಲಿ ವಾಸವಾಗಿರುವ ವ್ಯಕ್ತಿಗೆ ತಿಳಿಸುವ ಮೂಲಕ ಇಲ್ಲ ಇನ್ನಿತರ ಯಾವುದೇ ರೂಢಿಗತ ಕ್ರಮದಲ್ಲಿಆಸ್ತಿಯ ಹಕ್ಕನ್ನು ಖರೀದಿದಾರನಿಗೆ ವರ್ಗಾಯಿಸಬೇಕು ಎಂದು ಕ್ರಮಾದೇಶ 21 ರ ನಿಯಮ 96 ರಲ್ಲಿ ಹೇಳಿದೆ.

ಸ್ಥಿರಾಸ್ತಿಗಳನ್ನು ಮಾರಾಟ ಮಾಡುವಾಗ ಮೇಲೆ ಹೇಳಿದ ನಿಯಮಗಳನ್ನು ಪಾಲಿಸುವುದು ಅತಿ ಅವಶ್ಯಕ. ಅತಿ ಹೆಚ್ಚಿನ ಬೆಲೆ ಸಿಗುವ ಸಲುವಾಗಿ ಮತ್ತು ಯಾರಿಗೂ ಅನ್ಯಾಯ ಆಗಬಾರದು ಎನ್ನುವ ಉದ್ದೇಶದಿಂದ ಈ ನಿಯಮಗಳನ್ನು ರೂಪಿಸಿದ್ದು, ಬೇಲಿಫ್‌ಗಳು ನಿಯಮಗಳನ್ನು ತಿಳಿದುಕೊಂಡು ಮಾರಾಟ ಪ್ರಕ್ರಿಯೆಯನ್ನು ನಡೆಸಬೇಕು. ಮೇಲೆ ಹೇಳಿದ ವಿಧಾನಗಳನ್ನು ಅನುಸರಿಸಿ ಮಾರಾಟ ಪ್ರಕ್ರಿಯೆಯನ್ನು ನಡೆಸಿದಾಗ ಉದ್ದೇಶಿತ ಫಲ ಪ್ರಾಪ್ತಿಯಾಗುತ್ತದೆ. ಇಲ್ಲದೇ ಇದ್ದಲ್ಲಿ ಮಾರಾಟ ಪ್ರಕ್ರಿಯೆಯನ್ನು ಪ್ರಶ್ನಿಸಿ ತಕರಾರನ್ನು ಸಲ್ಲಿಸುವ ಪ್ರಸಂಗಗಳು ಉದ್ಭವಿಸಿ, ಅಮಲ್ಜಾರಿ ಅರ್ಜಿಗಳ ತೀರ್ಮಾನದಲ್ಲಿ ವಿಳಂಬವಾಗುತ್ತದೆ.

*****

**ವಿಷಯ ಸೂಚಿ: 7**

## ಪ್ರೊಸಸ್ ಸರ್ವರ್ ಮತ್ತು ಬೇಲಿಫ್‌ಗಳು ಎದುರಿಸುವ ಸಮಸ್ಯೆಗಳು ಮತ್ತು ಅದಕ್ಕೆ ಪರಿಹಾರ

### 1. ಪೊಲೀಸ್ ರಕ್ಷಣೆಯನ್ನು ಯಾವಾಗ ಪಡೆಯಬೇಕು:-

ವಾರೆಂಟ್‌ಗಳನ್ನು ಕಾರ್ಯಗತ  ಗೊಳಿಸುವಾಗ ಅಡ್ಡಿ ಉಂಟಾದರೆ ಪೊಲೀಸ್ ರಕ್ಷಣೆಯನ್ನು ಪಡೆಯುವ ಅಧಿಕಾರ ಇದೆ, ಆದರೆ ನ್ಯಾಯಾಲಯದ ಆದೇಶ ಇಲ್ಲದೆ ಪೊಲೀಸ್ ರಕ್ಷಣೆ ಮತ್ತು ಸಹಾಯ ಸಿಗುವುದಿಲ್ಲ. ಅಡಚಣೆಯಿಂದಾಗಿ ವಾರೆಂಟ್ ಗಳನ್ನು ಕಾರ್ಯಗತಗೊಳಿಸಲು ಆಗದೇ ಇದ್ದಲ್ಲಿ, ಯಾವ ರೀತಿ ಅಡಚಣೆ ಉಂಟಾಗಿದೆ ಮತ್ತು ಯಾವ ರೀತಿಯ ರಕ್ಷಣೆ ಬೇಕು ಎಂಬುದನ್ನು  ನಮೂದಿಸಿ ವರದಿಯನ್ನು ಸಲ್ಲಿಸಬೇಕು. ನ್ಯಾಯಾಲಯ ವರದಿಯನ್ನು ಪರಿಶೀಲಿಸಿ ಅಗತ್ಯ ರಕ್ಷಣೆಯನ್ನು ನೀಡುತ್ತದೆ.

ಕರ್ನಾಟಕ ಸಿವಿಲ್ ನಡವಳಿಕೆಯ ನಿಯಮ 220 ರಲ್ಲಿ ಪೊಲೀಸ್ ರಕ್ಷಣೆಯನ್ನು ನೀಡುವ ಬಗ್ಗೆ ವರದಿ/ಹಿಂಬರಹವನ್ನು ಅವಲೋಕಿಸಿ, ನ್ಯಾಯಾಲಯ ಆದೇಶ ಮಾಡಬೇಕು ಎಂದು ಹೇಳುತ್ತದೆ. ನ್ಯಾಯಾಲಯ ಪೊಲೀಸ್ ರಕ್ಷಣೆಯ ಆದೇಶವನ್ನು ನೀಡಲು ಆದೇಶಿಸದಿದ್ದಲ್ಲಿ ಅಂತಹ ರಕ್ಷಣೆಯನ್ನು ನೀಡುವುದು ಪೊಲೀಸ್ ಇಲಾಖೆಯ ಕರ್ತವ್ಯ ಎಂದು  ನಿಯಮ 220 ರಲ್ಲಿ ಹೇಳಿದೆ.

ಡಿಕ್ರಿದಾರನ ಸಹಕಾರ ತಮಗೆ ಸಿಗುವುದಿಲ್ಲ ಎನ್ನುವುದು ಸಾಮಾನ್ಯವಾಗಿ ಎಲ್ಲರ ದೂರು ಚರವಸ್ತುಗಳನ್ನು ಜಪ್ತಿ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಮತ್ತು ಆಸ್ತಿಗಳನ್ನು ಸ್ವಾಧೀನತೆ ಕೊಡಿಸುವ ಸಂದರ್ಭದಲ್ಲಿ ಡಿಕ್ರಿದಾರ ಇಲ್ಲ ಆತನಿಂದ ನೇಮಕಗೊಂಡ ವ್ಯಕ್ತಿ  ಹಾಜರು ಇರಬೇಕಾಗುತ್ತದೆ. ಜಪ್ತಿ ಮಾಡಿದ ವಸ್ತುಗಳನ್ನು ಸಾಗಿಸುವ ಇಲ್ಲ ಸೂಕ್ತ ಸ್ಥಳದಲ್ಲಿ ಸಂಗ್ರಹಿಸುವ ವೆಚ್ಚಗಳನ್ನು ಡಿಕ್ರಿದಾರ ಭರಿಸಬೇಕಾಗಿರುವುದರಿಂದ ಆತನ ಹಾಜರಾತಿ ಅತಿ ಅವಶ್ಯಕ. ವಾರಂಟಿನ ಜೊತೆ ಚರವಸ್ತುಗಳ ಪಟ್ಟಿ ಇಲ್ಲದೇ ಇದ್ದಲ್ಲಿ. ಆತ  ತೋರಿಸಿದ ಚರವಸ್ತುಗಳನ್ನು ಜಪ್ತು ಮಾಡಬೇಕು. ಅದೇ ರೀತಿ, ಸ್ಥಿರ ಸ್ವತ್ತಿನ ಸ್ವಾಧೀನತೆಯನ್ನು ಡಿಕ್ರಿದಾರನಿಗೆ ನೀಡಬೇಕು. ಆ ಕಾರಣ ಆತನ ಹಾಜರಾತಿ ಅತೀ ಅವಶ್ಯಕ.

ಜಪ್ತಿ ವಾರೆಂಟ್ ಇಲ್ಲ ಸ್ವಾಧೀನ ವಾರೆಂಟನ್ನು ಕಾರ್ಯಗತಗೊಳಿಸಲು ಹೋಗುವ ದಿನಾಂಕ ಮತ್ತು ಸಮಯವನ್ನು ಡಿಕ್ರೀದಾರನಿಗೆ ತಿಳಿಸತಕ್ಕದ್ದು. ಸದರೀ ದಿನ ಮತ್ತು ಸಮಯದಂದು ಸ್ಥಳಕ್ಕೆ ಹೋದಾಗ ಡಿಕ್ರಿದಾರ ಅಲ್ಲಿ ಇಲ್ಲದೇ ಇದ್ದಲ್ಲಿ. ಸದರೀ ವಿಷಯವನ್ನು ನಮೂದಿಸಿದ ವರದಿಯೊಂದಿಗೆ. ವಾರೆಂಟನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು.

ಕರ್ನಾಟಕ ಸಿವಿಲ್ ನಡವಳಿಕೆ ನಿಯಮ 219 ರಲ್ಲಿ, ಡೆಲಿವರಿ ವಾರೆಂಟ್, ಜಪ್ತಿ ವಾರೆಂಟ್ ಇಲ್ಲ ಮಾರಾಟ ಮಾಡುವ ವಾರೆಂಟನ್ನು ಕಾರ್ಯಗತಗೊಳಿಸಲು ಹೊರಡಿಸುವುದಕ್ಕಿಂತ ಮೊದಲು ಡಿಕ್ರಿದಾರ, ಖರೀದಿದಾರ ಅಥವಾ ಆತನ ವಕೀಲ, ಇಲ್ಲ ಗುಮಾಸ್ತನಿಗೆ ಯಾವಾಗ ಮತ್ತು ಯಾವ ಸಮಯದಲ್ಲಿ ಸ್ಥಳಕ್ಕೆ ಬರುತ್ತೇವೆ ಎಂದು ಅಮೀನ ತಿಳಿಸಬೇಕು ಮತ್ತು ತಿಳಿಸಿದ ಬಗ್ಗೆ ವಾರೆಂಟ್‌ನಲ್ಲಿ ಸಹಿ ಮಾಡಬೇಕು ಎಂದು ಹೇಳುತ್ತದೆ.

**2. <u>ಜಪ್ತಿ ಮಾಡಿದ ಚರವಸ್ತುಗಳನ್ನು ಯಾರ ಸ್ವಾಧಿನಕ್ಕೆ ಕೊಡಬೇಕು:</u>**

ಜಪ್ತಿ ಮಾಡಿದ ಚರವಸ್ತುಗಳನ್ನು ನ್ಯಾಯಾಲಯಕ್ಕೆ ಸಾಗಿಸಬೇಕು. ಇಲ್ಲ ಯಾವುದೇ ಗೊಡಾಮಿನಲ್ಲಿ ಇಡಬಹುದು. ಇದಕ್ಕೆ ತಗಲುವ ಖರ್ಚನ್ನು ಡಿಕ್ರಿದಾರ ನೀಡಬೇಕು. ಕಟ್ಟಡವನ್ನು ಕಾಲಿ ಮಾಡಲು ವಾರೆಂಟನ್ನು ಕಾರ್ಯಗತಗೊಳಿಸುವಾಗ ಕಟ್ಟಡದ ಒಳಗೆ ಚರವಸ್ತುಗಳು ಇದ್ದರೆ, ಅದನ್ನು ತೀರ್ಪುಋಣಿಗೆ ನೀಡಬೇಕು. ತೀರ್ಪುಋಣಿ ಇಲ್ಲದೆ ಇದ್ದಲ್ಲಿ ಅಥವಾ ತೆಗೆದುಕೊಳ್ಳಲು ನಿರಾಕರಿಸಿದ್ದಲ್ಲಿ. ಅವುಗಳ ಪಟ್ಟಿಯನ್ನು ಮಾಡಿ ಡಿಕ್ರೀದಾರನ ಸ್ವಾಧೀನಕ್ಕೆ ನೀಡಿ, ಈ ಬಗ್ಗೆ ವರದಿಯನ್ನು ಸಲಿಸಬೇಕು.

**3 <u>ಹಾಜರು ಪ್ರಕ್ರಿಯೆ ನಂತರ ಮಾರಾಟ ಮೊತ್ತದ 25 ಶೇಕಡದಷ್ಟು ಮೊತ್ತವನ್ನು ಯಾವಾಗ ಕಟ್ಟಬೇಕು:</u>**

ನ್ಯಾಯಾಲಯದಲ್ಲಿ ಹರಾಜು ಆದ ಕೂಡಲೇ ಖರೀದಿದಾರ ಕ್ರಯದ ಮೊತ್ತದ 25 ಶೇಕಡದಷ್ಟು ಮೊತ್ತವನ್ನು ಕಟ್ಟಬೇಕು. ಹಾಗೆ ಹಣವನ್ನು ಕೊಟ್ಟಲು ವಿಫಲನಾದರೆ. ಕೂಡಲೇ ಮತ್ತೊಂದು ಸಲ ಹರಾಜು ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು. ನಂತರ ಉಳಿದ ಹಣವನ್ನು 15 ದಿನಗಳ ಬಳಿಕ ಕಟ್ಟಬೇಕು. (ಕ್ರಮಾದೇಶ ಇಪ್ಪತ್ತೊಂದು ನಿಯಮ 84 ರಿಂದ 86).

**4. <u>ವಾರೆಂಟ್ ಅನ್ನು ಕಾರ್ಯಗತಗೊಳಿಸುವಾಗ ಸ್ಥಳೀಯರಿಂದ ಅಡಚಣೆ ಉಂಟಾದಾಗ ಏನು ಮಾಡಬೇಕು:</u>**

ವಾರೆಂಟನ್ನು ಯಾವ ಕಾರಣಕ್ಕಾಗಿ ಕಾರ್ಯಗತಗೊಳಿಸಲು ಆಗಿಲ್ಲ ಎಂಬುದನ್ನು ವರದಿಯಲ್ಲಿ ಬರೆದು ನ್ಯಾಯಾಲಯಕ್ಕೆ ಸಲ್ಲಿಸಬೇಕು. ನ್ಯಾಯಾಲಯ ವರದಿಯನ್ನು ಪರಿಶೀಲಿಸಿ. ಮತ್ತು ಆದೇಶವನ್ನು ಮಾಡಬೇಕು. (ಕರ್ನಾಟಕ ಸಿವಿಲ್ ನಡವಳಿಕೆಯ ನಿಯಮ 219).

**5. <u>ಅಪೂರ್ಣ ವಿಳಾಸದಿಂದಾಗಿ ಪ್ರೊಸೆಸ್ ಮತ್ತು ವಾರೆಂಟ್‌ಗಳ ನಜಾರಿ:</u>**

ವಿಳಾಸ ಅಪೂರ್ಣವಾಗಿರುವುದರಿಂದ. ಇಲ್ಲ ನೀಡಿದ ಸ್ಥಳದಲ್ಲಿ ವ್ಯಕ್ತಿ ಇಲ್ಲದೆ ಇದ್ದಲ್ಲಿ, ಅದನ್ನು ವಿವರಿಸಬೇಕು. ಆಗೆ ನಮೂದಿಸಿ ವಾರೆಂಟ್ ಇಲ್ಲ ಸಮನ್ಸನ್ನು ವಾಪಸ್ಸು ಮಾಡಬೇಕು, ಅದು ಸರಿಯಾಗಿ ನೀಡುವಂತೆ ಸರಿಯಾದ ವಿಳಾಸವನ್ನು ನೀಡುವಂತೆ ಡಿಕ್ರಿದಾರನಿಗೆ ಆದೇಶಿಸಲು ನ್ಯಾಯಾಲಯಕ್ಕೆ ಸಹಕಾರಿಯಾಗುತ್ತದೆ.

**6. <u>ಜಾಗ ಮತ್ತು ಕಟ್ಟಡಗಳ ಗುರುತಿಸುವಿಕೆಯಲ್ಲಿ ತೊಂದರೆ:</u>**

ಸಾಮಾನ್ಯವಾಗಿ ಡಿಕ್ರೀದಾರ ಸ್ಥಳವನ್ನು ತೋರಿಸಬೇಕಾಗುತ್ತದೆ. ಕಟ್ಟಡ ಮತ್ತು ಜಾಗ ಗುರುತಿಸುವಿಕೆಗೆ ತೊಂದರೆ ಆದಲ್ಲಿ ಯಾವ ರೀತಿ ತೊಂದರೆಯಾಗಿದೆ ಎಂದು ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಬೇಕು.

ಜಮೀನಿನ ಒಂದು ಭಾಗದ ಸ್ವಾಧೀನತೆಯನ್ನು ಕೊಡಿಸಲು ಆದೇಶ ಆಗಿದ್ದಲ್ಲಿ, ಡಿಕ್ರಿಯ ಜೊತೆಗಿನ ನಕ್ಷೆಯನ್ನು ಪಡೆದುಕೊಳ್ಳಬೇಕು. ಮತ್ತು ಸರ್ವೇಯರ್ ಸಹಾಯದೊಂದಿಗೆ ಗಡಿಗಳನ್ನು ಗುರುತಿಸಿ ಸ್ವಾಧೀನತೆ ನೀಡಬೇಕಾಗುತ್ತದೆ.

ನಿವೇಶನ ಇಲ್ಲ ಕಟ್ಟಡದ ಭಾಗವನ್ನು ಒಡೆದು ಸ್ವಾಧೀನತೆ ನೀಡುವ ವಾರೆಂಟನ್ನು ಇಂಜಿನಿಯರ್ ಸಹಾಯದೊಂದಿಗೆ ಕಾರ್ಯಗತಗೊಳಿಸಬೇಕು. ಕಟ್ಟಡ ಒಡೆಯುವ ಮತ್ತು ಸ್ವಾಧೀನತೆಗೆ ಸಂಬಂಧಿಸಿದ ಖರ್ಚನ್ನು ಡಿಕ್ರಿದಾರ ನೀಡಬೇಕು. ಆದ ಖರ್ಚುಗಳನ್ನು ವರದಿಯಲ್ಲಿ ನಮೂದಿಸಬೇಕು.

**7. <u>ಸ್ಥಳೀಯರ ಸಹಕಾರ ಸಿಗದೇ ಇರುವುದು ಮತ್ತು ಸಾಕ್ಷಿದಾರರು ಸಹಿಗಳನ್ನು ಹಾಕಲು ನಿರಾಕರಿಸುವುದು:</u>**

ಸ್ಥಳೀಯರಿಗೆ ತಿಳಿ ಹೇಳುವ ಮೂಲಕ ಅವರ ಸಹಕಾರವನ್ನು ಪಡೆಯಬಹುದು. ಸಾಕ್ಷಿದಾರರಿಗೆ ಯಾವ ಉದ್ದೇಶಕ್ಕೆ ಸಹಿಗಳನ್ನು ಹಾಕಬೇಕು ಮತ್ತು ಇದರಿಂದ ಏನೂ ತೊಂದರೆ ಆಗುವುದಿಲ್ಲ ಎಂದು ಹೇಳಿದಲ್ಲಿ ಸಹಿಗಳನ್ನು ಹಾಕಿಸಿಕೊಳ್ಳಬಹುದು. ಇದಾದ ಮೇಲು ಸಹಿಗಳನ್ನು ಹಾಕದೆ ಇದ್ದಲ್ಲಿ, ವರದಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಬೇಕು.

**8. <u>ಕಟ್ಟಡ ಇಲ್ಲ ಜಾಗದ ಒಳಗೆ ಪ್ರವೇಶಿಸಲು ಬಿಡದೇ ಇರುವುದು:</u>**

ಆ ಕಟ್ಟಡ ಇಲ್ಲ ಜಾಗದ ಒಳಗೆ ಪ್ರವೇಶಿಸಲು ಬಿಡದೇ ಇದ್ದಲ್ಲಿ, ವರದಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಬೇಕು, ಪೋಲಿಸರ ಸಹಾಯ ಬೇಕಾಗಿದ್ದಲ್ಲಿ ಅದರ ಅವಶ್ಯಕತೆಯ ಬಗ್ಗೆ ವರದಿಯಲ್ಲಿ ನಮೂದಿಸಬೇಕು .

**9. <u>ಕಂದಾಯ ಅಧಿಕಾರಿ, ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಸಹಕಾರ ನೀಡಲು ನಿರಾಕರಿಸುವುದು:</u>**

ಅಂತಹ ಸಿಬ್ಬಂದಿಗಳಿಗೆ ಸಹಕಾರ ನೀಡುವ ಅಗತ್ಯತೆ ಏನು ಎನ್ನುವ ಬಗ್ಗೆ ತಿಳಿ ಹೇಳಬೇಕು. ಮತ್ತು ಸಹಕಾರ ನೀಡುವಂತೆ ಕೇಳಿಕೊಳ್ಳಬೇಕು. ಅದಾದ ಮೇಲೂ ಸಹಕಾರ ನೀಡದೇ ಇದ್ದಲ್ಲಿ, ಸದರಿ ಸಿಬ್ಬಂದಿಯ ವಿಳಾಸ ಮತ್ತು ಯಾವ ರೀತಿಯಲ್ಲಿ ಸಹಕಾರ ನೀಡಲು ನಿರಾಕರಿಸಿದ್ದಾರೆ. ಎಂಬುದನ್ನು ನಮೂದಿಸಿ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಬೇಕು.

ನ್ಯಾಯಾಲಯಕ್ಕೆ ಸಲ್ಲಿಸುವ ವರದಿ ಸ್ಪಷ್ಟವಾಗಿ ಇರಬೇಕು ಮತ್ತು ವರದಿಯು ನಿಯಮಕ್ಕೆ ಅನುಸಾರವಾಗಿ ಇರಬೇಕು. ಸಮನ್ಸ್ ಮತ್ತು ನೋಟಿಸ್ ಯಾವ ಕಾರಣಕ್ಕಾಗಿ ಜಾರಿಯಾಗಿಲ್ಲ ಎಂಬುದರ ಬಗ್ಗೆ ಸಂಪೂರ್ಣ ವಿವರ ಪ್ರೊಸೆಸ್ ಅಥವಾ ವಾರೆಂಟಿನ ಜೊತೆ ಸಲ್ಲಿಸುವ ವರದಿ ಅಥವಾ ಹಿಂಬರಹದಲ್ಲಿ ನಮೂದಿಸಿರಬೇಕು. ಹಾಗೆ ಸಮನ್ಸ್ ಜಾರಿಯಾದಾಗ ಯಾವ ರೀತಿ ಜಾರಿ ಮಾಡಲಾಗಿದೆ ಎಂಬುದರ ಬಗ್ಗೆ ಸ್ಪಷ್ಟತೆ ಇರಬೇಕು. ಇದರಿಂದಾಗಿ ನ್ಯಾಯಾಲಯಕ್ಕೆ ಮುಂದಿನ ಕ್ರಮ ಕೈಗೊಳ್ಳಲು. ಸಹಕಾರಿಯಾಗುತ್ತದೆ.

*****

# ನ್ಯಾಷನಲ್ ಸರ್ವೀಸ್ ಅಂಡ್ ಟ್ರ್ಯಾಕಿಂಗ್ ಆಫ್ ಎಲೆಕ್ಟ್ರಾನಿಕ್ ಪ್ರೋಸೆಸಸ್ (NSTEP)

## ಬಳಕೆದಾರರ ಕೈಪಿಡಿ

## ಪರಿಚಯ

ನ್ಯಾಷನಲ್ ಸರ್ವೀಸ್ ಅಂಡ್ ಟ್ರ್ಯಾಕಿಂಗ್ ಆಫ್ ಎಲೆಕ್ಟ್ರಾನಿಕ್ ಪ್ರೊಸೆಸಸ್ **(NSTEP)** ಒಂದು ಆಂಡ್ರಾಯ್ಡ್ ಮೊಬೈಲ್ ತಂತ್ರಾಂಶ ಆಗಿದ್ದು, ಇದನ್ನು ಕೋರ್ಟ್ ಪ್ರೊಸೆಸ್ ಗಳ ಜಾರಿ ಮತ್ತು ವಿತರಣೆಗಾಗಿ ಅಭಿವೃದ್ಧಿ ಪಡಿಸಲಾಗಿದೆ. ಈ ಆ್ಯಪನ್ನು ನ್ಯಾಯಾಲಯದ ಬೇಲಿಫ್ ಗಳು ಪ್ರೊಸೆಸ್ ಗಳ ವಿತರಣೆಗೆ ಬಳಸುತ್ತಾರೆ. ಈಗಾಗಲೆ **CIS (Case Information System)** ತಂತ್ರಾಂಶವನ್ನು ಭಾರತದ ಎಲ್ಲ ನ್ಯಾಯಾಲಯಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಈ **CIS** ತಂತ್ರಾಂಶವು ಎಲೆಕ್ಟ್ರಾನಿಕ್ ಪ್ರೊಸೆಸ್ ಗಳನ್ನು ಪಿಡಿಎಫ್ ರೂಪದಲ್ಲಿ ತಯಾರಿಸಲು ವ್ಯವಸ್ಥೆ ಕಲ್ಪಿಸುತ್ತದೆ. ಹೀಗೆ ಒಮ್ಮೆ ಎಲೆಕ್ಟ್ರಾನಿಕ್ ಪ್ರೊಸೆಸ್ ಗಳು ತಯಾರಾದ ನಂತರ ಆಯಾ ನ್ಯಾಯಾಲಯದ ಪ್ರೊಸೆಸ್ ಅಡ್ಮಿನ್ ಗಳು ಆ ಎಲೆಕ್ಟ್ರಾನಿಕ್ ಪ್ರೊಸೆಸ್ ಗಳನ್ನು ವಿತರಣೆ ಮಾಡಲು ಬೇಲಿಫ್ ಗಳಿಗೆ ಹಂಚಿಕೆ ಮಾಡುತ್ತಾರೆ. ತಮಗೆ ಹಂಚಿಕೆಯಾದ ಪ್ರೊಸೆಸ್ ಗಳನ್ನು ನೋಡಲು ಬೇಲಿಫ್ ಗಳು **NSTEP** ಆ್ಯಪ್ ಅಳವಡಿಸಿರುವ ಸ್ಮಾರ್ಟ್ ಫೋನ್ ಹೊಂದಿರುಬೇಕಾಗುತ್ತದೆ. ಈ ಆ್ಯಪನ್ನು ಬಳಸುವ ವಿಧಾನ ಕೆಳಕಂಡಂತಿರುತ್ತದೆ.

**1. NSTEP** ಆ್ಯಪನ್ನು ತೆರೆದಾಗ ಮೊದಲು ಲಾಗಿನ್ ಸ್ಕ್ರೀನ್ ಬರುತ್ತದೆ. ಇದರಲ್ಲಿ ತಮ್ಮ ರಾಜ್ಯವನ್ನು ಆಯ್ಕೆ ಮಾಡಿ, ತಮ್ಮ ನೋಂದಾಯಿತ ಮೊಬೈಲ್ ನಂಬರ್ ಮತ್ತು ತಮಗೆ ಒದಗಿಸಲಾದ **OTP** ಯನ್ನು ನಮೂದಿಸಿ ಲಾಗಿನ್ ಆಗಬೇಕು.




ಚಿತ್ರ **1 :** ಲಾಗಿನ್

**2.** ಒಮ್ಮೆ ಲಾಗಿನ್ ಆದ ನಂತರ ಮುಖ್ಯ ಸ್ಕ್ರೀನ್ / ಹೋಮ್ ಸ್ಕ್ರೀನ್ ತೆರೆದುಕೊಳ್ಳುತ್ತದೆ.

ಈ ಹೋಮ್ ಸ್ಕ್ರೀನ್ ಕೆಳಕಂಡ ಮಾಹಿತಿಗಳನ್ನು ಒಳಗೊಂಡಿರುತ್ತದೆ.

ಅ) ಮೇಲ್ಭಾಗದಲ್ಲಿ ಇನ್ನೂ ಸ್ಟೇಟಸ್ ಅಪ್ ಲೋಡ್ ಆಗಬೇಕಾದ ಪ್ರೊಸೆಸ್ ಗಳ ಸಂಖ್ಯೆಯನ್ನು ನೋಡಬಹುದು.

ಆ) 'ಸ್ಕ್ಯಾನ್ **QR** ಕೋಡ್' ಆಯ್ಕೆಯನ್ನು ಬಳಸಿಕೊಂಡು ಪ್ರೊಸೆಸ್ ಮೇಲೆ ಮುದ್ರಿತವಾದ **QR** ಕೋಡನ್ನು ಸ್ಕ್ಯಾನ್ ಮಾಡುವ ಮೂಲಕ ಒಂದು ಕೇಸಿಗೆ ಸಂಬಂಧ ಪಟ್ಟ ಚಾಲ್ತಿಯಲ್ಲಿರುವ ಎಲ್ಲ ಪ್ರೊಸೆಸ್ ಗಳನ್ನು ನೋಡಬಹುದು.

ಇ) **QR** ಕೋಡನ್ನು ಸ್ಕ್ಯಾನ್ ಮಾಡಿದ ಬಳಿಕ **"Show Previous"** ಎಂಬ ಆಯ್ಕೆ ಸಕ್ರಿಯಗೊಳ್ಳುತ್ತದೆ. ಇದನ್ನು ಬಳಸಿಕೊಂಡು ಒಂದು ಕೇಸಿಗೆ ಸಂಬಂಧ ಪಟ್ಟ ಹಿಂದಿನ ಎಲ್ಲ ಪ್ರೊಸೆಸ್ ಗಳನ್ನು ನೋಡಬಹುದು.

ಈ) ಹೋಮ್ ಸ್ಕ್ರೀನಿನ ಮುಖ್ಯ ಭಾಗದಲ್ಲಿ ವಿತರಣೆಗೊಳ್ಳಬೇಕಾದ ಪ್ರೊಸೆಸ್ ಗಳ ಪಟ್ಟಿಯನ್ನು ನೋಡಬಹುದು.

ಉ) **"Refresh Process"** ಆಯ್ಕೆಯನ್ನು ಉಪಯೋಗಿಸಿಕೊಂಡು ಒಬ್ಬ ಬೇಲಿಫ್ ತನಗೆ ಹೊಸದಾಗಿ ಹಂಚಿಕೆಯಾದ ಪ್ರೊಸೆಸ್ ಗಳ ಪಟ್ಟಿಯನ್ನು ಪಡೆಯಬಹುದು.




ಚಿತ್ರ **2 :** ಪ್ರೊಸೆಸ್ ಗಳ ಪಟ್ಟಿ

**2.** ಪ್ರೊಸೆಸ್ ವಿತರಣೆ

**1.** ಬೇಲಿಫ್ ಪ್ರೊಸೆಸ್ ತಲುಪಬೇಕಾದ ವ್ಯಕ್ತಿಯ ವಿಳಾಸಕ್ಕೆ ಹೋದ ನಂತರ ಪ್ರೊಸೆಸ್ ಗಳ ಪಟ್ಟಿಯಲ್ಲಿ ಆ ವ್ಯಕ್ತಿಗೆ ಸಂಬಂಧ ಪಟ್ಟ ಪ್ರೊಸೆಸ್ಸಿನ ಮೇಲೆ ಕ್ಲಿಕ್ ಮಾಡಬೇಕು. ಆಗ, ಆ ಪ್ರೊಸೆಸ್ **PDF** ರೂಪದಲ್ಲಿ ಬಿತ್ತರಗೊಳ್ಳುತ್ತದೆ.

**2.** ಪ್ರೊಸೆಸ್ಸಿನ ಮುದ್ರಿತ ಪ್ರತಿಯನ್ನು ಸಂಬಂಧ ಪಟ್ಟ ವ್ಯಕ್ತಿಗೆ ಹಸ್ತಾಂತರಿಸಬೇಕು.

**3. "Capture Photo"** ಆಯ್ಕೆಯನ್ನು ಕ್ಲಿಕ್ ಮಾಡುವ ಮೂಲಕ ಸಂಬಂಧ ಪಟ್ಟ ವ್ಯಕ್ತಿಗೆ ಪ್ರೊಸೆಸ್ ವಿತರಣೆಯಾಗಿರುವುದರ ಫೋಟೋ ತೆಗೆಯಬಹುದು. ಫೋಟೋ ತೆಗೆಯಲು ಫೋಟೋ ಐಕಾನಿನ ಮೇಲೆ ಕ್ಲಿಕ್ ಮಾಡಬೇಕು.

**4. "Signature"** ಆಯ್ಕೆಯನ್ನು ಕ್ಲಿಕ್ ಮಾಡುವ ಮೂಲಕ ಪ್ರೊಸೆಸ್ ಜಾರಿಯಾದ ವ್ಯಕ್ತಿಯ ಸಹಿಯನ್ನು ಮೊಬೈಲ್ ಸ್ಕ್ರೀನಿನ ಮೇಲೆಯೆ ಪಡೆಯಬಹುದು. ಸಹಿ ಸಂಗ್ರಹಿಸಿದ ನಂತರ

 ಐಕಾನಿನ ಮೇಲೆ ಕ್ಲಿಕ್ ಮಾಡಬೇಕು.

**5.** ಸಹಿ ಸಂಗ್ರಹವಾದ ನಂತರ **"Location"** ಆಯ್ಕೆಯನ್ನು ಬಳಸಿಕೊಂಡು ಪ್ರೊಸೆಸ್ ವಿತರಣೆಯಾದ ಜಾಗದ ನಕ್ಷೆಯನ್ನು ನೋಡಬಹುದು. ಇಲ್ಲಿ ಬೇಲಿಫ್ **"Save"** ಆಯ್ಕೆಯನ್ನು ಕ್ಲಿಕ್ ಮಾಡುವ ಮೂಲಕ ಆ ಜಾಗದ ಅಕ್ಷಾಂಶ ರೇಖಾಂಶಗಳನ್ನು ಸಂಗ್ರಹಿಸಬಹುದು.

**6. "Reload/Refresh"** ಆಯ್ಕೆಯನ್ನು ಬಳಸಿಕೊಂಡು ಮ್ಯಾಪನ್ನು ರಿಫ್ರೆಶ್ ಮಾಡಬಹುದು.




ಚಿತ್ರ 5 : ಫೋಟೋ, ಸಹಿ ಸಂಗ್ರಹ, ಲೊಕೇಶನ್

**7.** ಲೊಕೇಶನ್ ಅನ್ನು ಸಂಗ್ರಹಿಸಿದ ಬಳಿಕ ಬೇಲಿಫ್ **"Service"** ಆಯ್ಕೆಯನ್ನು ಕ್ಲಿಕ್ ಮಾಡಿ ಆ ಪ್ರೊಸೆಸ್ಸಿನ ಸ್ಥಿತಿಯನ್ನು **"Served"** ಅಥವಾ **"Not Served"** ಎಂದು, ಅವಕ್ಕೆ ತಕ್ಕ ಸಮಂಜಸವಾದ ಕಾರಣಗಳೊಂದಿಗೆ ಗುರುತು ಮಾಡಬೇಕು.

**8.** ಇದಾದ ನಂತರ ಬೇಲಿಫ್ **"Confirm and Upload"** ಆಯ್ಕೆಯನ್ನು ಕ್ಲಿಕ್ ಮಾಡುವ ಮೂಲಕ ಆ ಪ್ರೊಸೆಸ್ಸಿನ ಸ್ಥಿತಿಯನ್ನು ಸರ್ವರ್ ನಲ್ಲಿ ಅಪ್ ಲೋಡ್ ಮಾಡಬೇಕು.







ಚಿತ್ರ **6 ಮತ್ತು 7:** ಸರ್ವೀಸ್

**9.** ಇದರಲ್ಲಿ ಪ್ರೊಸೆಸ್ಸಿನ ಸ್ಥಿತಿಯನ್ನು ಸರ್ವರ್ ಗೆ ಅಪ್ ಲೋಡ್ ಮಾಡುವಾಗ ನೆಟ್ ವರ್ಕ್ ಅಥವಾ ಇನ್ನಾವುದೇ ತಾಂತ್ರಿಕ ತೊಂದರೆಯಾದರೆ ಆ ಪ್ರೊಸೆಸ್ ಗೆ ಸಂಬಂಧಿಸಿದ ಸಂಗ್ರಹಿತ ವಿವರಗಳೆಲ್ಲ ಮೊಬೈಲಿನಲ್ಲಿಯೇ ಸೇವ್ ಆಗಿರುತ್ತದೆ.

**10.** ಹೀಗೆ ನೆಟ್ ವರ್ಕ್ ಸಿಗದೆ ಅಪ್ ಲೋಡ್ ಆಗದೇ ಮೊಬೈಲಿನಲ್ಲಿಯೇ ಉಳಿದ ಪ್ರೊಸೆಸ್ ಗಳ ವಿವರಗಳನ್ನು ಸೈಡ್ ಮೆನುನಲ್ಲಿ ಇರುವ **"Upload"** ಆಯ್ಕೆಯನ್ನು ಬಳಸಿಕೊಂಡು ನೆಟ್ ವರ್ಕ್ ಇರುವ ಜಾಗದಿಂದ ಸರ್ವರ್ ನಲ್ಲಿ ಅಪ್ ಲೋಡ್ ಮಾಡಬಹುದು.

**3.** ಸೈಡ್ ಮೆನು

ಆ್ಯಪ್ ನ ಎಡಮೇಲ್ಭಾಗದಲ್ಲಿರುವ ಮೂರು ಗೆರೆಗಳ ಗುರುತನ್ನು ಕ್ಲಿಕ್ ಮಾಡುವ ಮೂಲಕ ಸೈಡ್ ಮೆನುವನ್ನು ತೆರೆಯಬಹುದು. ಇದರಲ್ಲಿ ಅಪ್ ಲೋಡ್, ಡಿಲೀಟ್ ಮತ್ತು ಲಾಗ್ ಔಟ್ ಆಯ್ಕೆಗಳನ್ನು ಕಾಣಬಹುದು.

**4.** ಅಪ್ ಲೋಡ್

**1.** ಈ ಆಯ್ಕೆಯಲ್ಲಿ ಈಗಾಗಲೆ ವಿತರಣೆಯಾಗಿ ಜಾರಿಯಾಗಲ್ಪಟ್ಟ ಎಲ್ಲ ಪ್ರೊಸೆಸ್ ಗಳ ಪಟ್ಟಿಯನ್ನು ನೋಡಬಹುದು.

**2.** ಬೇಲಿಫ್ ಇದರ ಮೂಲಕ ವಿತರಣೆಯಾಗಿ ತಾಂತ್ರಿಕ ತೊಂದರೆಯಿಂದ ಅಪ್ ಲೋಡ್ ಆಗದೇ ಇರುವ ಪ್ರೊಸೆಸ್ ಗಳ ಸ್ಥಿತಿಯನ್ನು ಸರ್ವರ್ ನಲ್ಲಿ ಅಪ್ ಲೋಡ್ ಮಾಡಬಹುದು.

**3.** ಈ ಆಯ್ಕೆಯ ಮೂಲಕ ಪ್ರೊಸೆಸ್ ಗಳ ಸ್ಥಿತಿಯನ್ನು ರೀ ಅಪ್ ಲೋಡ್ ಸಹ ಮಾಡಬಹುದು.




ಚಿತ್ರ **8 :** ಅಪ್ ಲೋಡ್

**5.** ಡಿಲೀಟ್

ಈ ಆಯ್ಕೆಯ ಮೂಲಕ ಈಗಾಗಲೇ ಸರ್ವರ್ ನಲ್ಲಿ ಸ್ಥಿತಿ ಅಪ್ ಲೋಡ್ ಆಗಿರುವ ಪ್ರೊಸೆಸ್ ಗಳ ಪಟ್ಟಿಯನ್ನು ನೋಡಬಹುದು ಹಾಗೂ ಡಿಲೀಟ್ ಆಯ್ಕೆಯನ್ನು ಬಳಸುವ ಮೂಲಕ ಅಪ್ ಲೋಡ್ ಆದ ಪ್ರೊಸೆಸ್ ಗಳನ್ನು ಮೊಬೈಲಿನಿಂದ ಡಿಲೀಟ್ ಮಾಡಬಹುದು.

**6.** ಲಾಗ್ ಔಟ್

ಈ ಆಯ್ಕೆಯ ಮೂಲಕ ಬೇಲಿಫ್ ಪ್ರೊಸೆಸ್ ವಿತರಣೆ ಆದ ನಂತರ ಆ್ಯಪ್ ನಿಂದ ನಿರ್ಗಮಿಸಬಹುದು.

*********

**ಅನುಸೂಚಿ -9**

**Appendic - E**

**ಅನುಬಂಧ – ಇ**

**ಅಮಲ್ಜಾರಿ**

**ನಂ. 1**

**............**ಗೆ

**ಸಂದಾಯವನ್ನು ಅಥವಾ ಹೊಂದಾಣಿಕೆಯನ್ನು ಪ್ರಮಾಣೀಕರಿಸಲಾಗಿದೆಯೆಂದು ಏಕೆ ಅಭಿಲೇಖಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ನೋಟೀಸು**

**(ಕ್ರ. XXI, ನಿ.2)**

**Notice to show cause why a Payment or Adjustment should not be Recorded as Certified (O. 21, R.2)**

**(ಶೀರ್ಷಿಕೆ)**

**...........**ಗೆ

**ಮೇಲೆ ಹೆಸರಿಸಲಾದ ದಾವೆಯಲ್ಲಿನ ಡಿಕ್ರಿಯ ಅಮಲ್ಜಾರಿಯಲ್ಲಿ ಆ ಡಿಕ್ರಿಯ ಮೇರೆಗೆ ವಸೂಲಿಯವಾದ.................... ರೂಪಾಯಿಗಳ ಮೊಬಲಗನ್ನು ಸಂದಾಯ/ಹೊಂದಾಣಿಕೆ ಮಾಡಲಾಗಿದೆ ಎಂದು ಮತ್ತು ಪ್ರಮಾಣೀಕರಿಸಲಾಗಿದೆಯೆಂದು ಹಾಗೆ ಏಕೆ ಅಭಿಲೇಖಿಸಬೇಕೆಂದು....................... ನು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುವುದರಿಂದ, ಮೇಲೆ ಹೇಳಿದಂತೆ ಸಂದಾಯವನ್ನು/ಹೊಂದಾಣಿಕೆಯನ್ನು ಪ್ರಮಾಣೀಕರಿಸಲಾಗಿದೆಯೆಂದು ಹಾಗೆ ಏಕೆ ಅಭಿಲೇಖಿಸಬಾರದೆಂಬುದಕ್ಕೆ ಕಾರಣವನ್ನು ತೋರಿಸಲು 20............... ರ.......... ನ ........ ದಿನದಿಂದ ಈ ನ್ಯಾಯಾಲಯದ ಮುಂದೆ ನೀವು ಹಾಜರಾಗಬೇಕೆಂದು ಈ ಮೂಲಕ ನಿಮಗೆ ನೋಟೀಸು ಕೊಡಲಾಗಿದೆ.**

**20.................... ರ .................. ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.**

**ನ್ಯಾಯಾಧೀಶ**

**ನಂ. 2**

**ಆಜ್ಞಾಪತ್ರ (46ನೇ ಪ್ರಕರಣ)**

**Precept (Section 46)**

**(ಶೀರ್ಷಿಕೆ)**

**ಡಿಕ್ರಿದಾರನನ್ನು ಸುನಾವಣೆ ಮಾಡಿದ ಮೇಲೆ ಇದಕ್ಕೆ ಅನುಬಂಧಿಸಿದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತನ್ನು ಜಪ್ತಿ ಮಾಡಬೇಕೆಂದು ಮತ್ತು ಡಿಕ್ರಿಯ ಅಮಲ್ಜಾರಿಗಾಗಿ ಡಿಕ್ರಿದಾರನು ಸಲ್ಲಿಸಬಹುದಾದ ಯಾವುದೇ ಅರ್ಜಿಯು ಇತ್ಯರ್ಥವಾಗುವ ತನಕ ಅದನ್ನು ಇಟ್ಟುಕೊಂಡಿರಬೇಕೆಂದು ನಿರ್ದೇಶಿಸಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ 46ನೇ ಪ್ರಕರಣದ ಮೇರೆಗೆ ಈ ಆಜ್ಞಾಪತ್ರವನ್ನು................ ನಲ್ಲಿರುವ................. ನ್ಯಾಯಾಲಯಕ್ಕೆ ಕಳುಹಿಸಬೇಕೆಂದು ಆದೇಶಿಸಲಾಗಿದೆ.**

**ಅನುಸೂಚಿ**

**20............. ರ.....................ನ..................ನೇ ದಿನಾಂಕ**

**ನ್ಯಾಯಾಧೀಶ**

**ನಂ. 3**

**ಅಮಲ್ಜಾರಿಗಾಗಿ ಡಿಕ್ರಿಯನ್ನು ಇನ್ನೊಂದು ನ್ಯಾಯಾಲಯಕ್ಕೆ**

**ಕಳುಹಿಸುವುದಕ್ಕಾಗಿ ಆದೇಶ**

**(ಕ್ರ . XI, ನಿ. 6)**

**Order Sending Decree for Execution to Another Court**

**(O. 21, R.6)**

**(ಶೀರ್ಷಿಕೆ)**

**ಮೇಲಿನ ದಾವೆಯಲ್ಲಿನ ಡಿಕ್ರಿದಾರನು, ತೀರ್ಪು ಋಣಿಯು ಸದರಿ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ವಾಸಿಸುತ್ತಿದ್ದಾನೆ ಅಥವಾ ಸ್ವತ್ತನ್ನು ಹೊಂದಿದ್ದಾನೆ ಎಂದು ಹೇಳಿ ಮೇಲಿನ ದಾವೆಯಲ್ಲಿನ ಡಿಕ್ರಿಯನ್ನು ಸದರಿ ನ್ಯಾಯಾಲಯವು ಅಮಲ್ಜಾರಿ ಮಾಡುವ ಸಲುವಾಗಿ..................... ನಲ್ಲಿರುವ........................ ನ್ಯಾಯಾಲಯಕ್ಕೆ ಕಳುಹಿಸಬೇಕಾದ ಪ್ರಮಾಣ ಪತ್ರಕ್ಕಾಗಿ ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸುವುದರಿಂದ, ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ XXI ನೇ ಕ್ರಮಾದೇಶದ 6ನೇ ನಿಯಮದ ಮೇರೆಗೆ ಸದರಿ ನ್ಯಾಯಾಲಯಕ್ಕೆ ಪ್ರಮಾಣಪತ್ರವನ್ನು ಕಳುಹಿಸುವುದು ಅವಶ್ಯಕವೆಂದು ಮತ್ತು ಯುಕ್ತವೆಂದು ಭಾವಿಸಲಾಗಿರುವುದರಿಂದ, ಹೀಗೆ ಆದೇಶಿಸಲಾಗಿದೆ.**

**ಈ ಆದೇಶದ ಪ್ರತಿಯನ್ನು, ಡಿಕ್ರಿಯ ಪ್ರತಿಯೊಂದಿಗೆ ಮತ್ತು ಅದರ ಅಮಲ್ಜಾರಿಗಾಗಿ ಮಾಡಿರಬಹುದಾದ ಯಾವುದೇ ಆದೇಶದ ಪ್ರತಿಯೊಂದಿಗೆ ಹಾಗೂ ಅದು ಸಮಾಧಾನವಾಗಿಲ್ಲದಿರುವ ಬಗೆಗಿನ ಪ್ರಮಾಣಪತ್ರದೊಂದಿಗೆ...................... ಗೆ ಕಳುಹಿಸತಕ್ಕುದು.**

**20................. ರ........................ ನ .......................ನೇ ದಿನಾಂಕ**

**ನ್ಯಾಯಾಧೀಶ**

## ನಂ.4

## ಡಿಕ್ರಿಯು ಸಮಾಧಾನವಾಗಿಲ್ಲದಿರುವ ಬಗ್ಗೆ ಪ್ರಮಾಣಪತ್ರ (ಕ್ರ. XXI, ನಿ.6)

### Certificate of Non-Satisfaction of Decree (O. 21, R.6)

**(ಶೀರ್ಷಿಕೆ)**

**20..................... ರ ............................ ನಂಬರಿನ ದಾವೆಯಲ್ಲಿನ ಈ ನ್ಯಾಯಾಲಯದ ಯಾವ ಡಿಕ್ರಿಯ ಪ್ರತಿಯನ್ನು ಇದಕ್ಕೆ ಲಗತ್ತಿಸಲಾಗಿದೆಯೋ ಆ ಡಿಕ್ರಿಯು, ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಅದನ್ನು ಅಮಲ್ಜಾರಿ ಮಾಡುವುದರ ಮೂಲಕ ಸಮಾಧಾನವಾಗಿಲ್ಲವೆಂದು ಪ್ರಮಾಣೀಕರಿಸುತ್ತೇನೆ.**

**20................... ರ.................... ನ .............................ನೇ ದಿನಾಂಕ.**

**ನ್ಯಾಯಾಧೀಶ**

**(1) ಭಾಗಶಃ ಆಗಿದ್ದರೆ 'ಸಮಾಧಾನವಾಗಿಲ್ಲ' ಎಂಬುದನ್ನು ಹೊಡೆದು ಹಾಕಿ ಮತ್ತು ಎಷ್ಟು ಆಗಿದೆ ಎಂಬುದನ್ನು ತಿಳಿಸಿ.**

# ನಂ. 5

## ಇನ್ನೊಂದು ನ್ಯಾಯಾಲಯಕ್ಕೆ ವರ್ಗಾಯಿಸಲಾದ ಡಿಕ್ರಿಯ

## ಅಮಲ್ಜಾರಿಯ ಬಗ್ಗೆ ಪ್ರಮಾಣಪತ್ರ (ಕ್ರ. XXI, ನಿ. 6)

**Certificate of Execution of Decree Transferred to Another Court (O. 21, R.6)**

**(ಶೀರ್ಷಿಕೆ)**

| | | |
|---|---|---|
| ರೂ.<br>ಪೈ.<br>ರೂ.<br>ಪೈ | 1. | ದಾವೆಯ ನಂಬರು ಮತ್ತು ಡಿಕ್ರಿಯನ್ನು ಮಾಡಿದ ನ್ಯಾಯಾಲಯ |
| | 2. | ಪಕ್ಷಕಾರರ ಹೆಸರುಗಳು |
| | 3. | ಅಮಲ್ಜಾರಿಗಾಗಿ ಸಲ್ಲಿಸಿದ ಅರ್ಜಿಯ ದಿನಾಂಕ |
| | 4. | ಹೊರಡಿಸಲಾದ ಆದೇಶಿಕೆಗಳು ಮತ್ತು ಅವುಗಳ ಜಾರಿಯ ದಿನಾಂಕಗಳು |
| | 5. | ಅಮಲ್ಜಾರಿಯ ಖರ್ಚುಗಳು |
| | 6. | ವಸೂಲಾದ ಮೊಬಲಗು |
| | 7. | ಮೊಕದ್ದಮೆಯನ್ನು ಹೇಗೆ ವಿಲೆ ಮಾಡಲಾಯಿತು |
| | 8. | ಷರಾ |
| | | |

ಕಾರ್ಯನಿರತ ಮೊಹರರನ ಸಹಿ
ನ್ಯಾಯಾಧೀಶನ ಸಹಿ

**ನಂ. 6**

**ಡಿಕ್ರಿಯ ಅಮಲ್ಜಾರಿಗಾಗಿ ಅರ್ಜಿ (ಕ್ರ. XXI ನಿ.11)**

**(ಶೀರ್ಷಿಕೆ)**

**.................................................ನ್ಯಾಯಾಲಯದಲ್ಲಿ,................................**
**...................................... ಡಿಕ್ರಿದಾರನಾದ.......................ಎಂಬ ನಾನು ಈ ಕೆಳಗೆ ವಿವರಿಸಿದ ಡಿಕ್ರಿಯ ಅಮಲ್ಜಾರಿಗಾಗಿ ಈ ಮೂಲಕ ಅರ್ಜಿಯನ್ನು ಸಲ್ಲಿಸುತ್ತೇನೆ.**

| | | |
|---|---|---|
| 1897 ರ 789 | 1. | ದಾವೆಯ ನಂ. |
| ಕ. ಖ. – ವಾದಿ<br>ಗ.ಘ. – ಪ್ರತಿವಾದಿ | 2. | ಪಕ್ಷಕಾರರ ಹೆಸರುಗಳು |
| 1897 ರ ಅಕ್ಟೋಬರ 11 | 3. | ಡಿಕ್ರಿಯ ದಿನಾಂಕ |
| ಇಲ್ಲ | 4. | ಡಿಕ್ರಿಯ ಮೇಲೆ ಯಾವುದೇ ಅಪೀಲನ್ನು ಹೊಡಲಾಗಿದೆಯೇ |
| ಯಾವುದೋ ಇಲ್ಲ | 5. | ಸಂದಾಯ ಅಥವಾ ಹೊಂದಾಣಿಕೆ ಯಾವುಮನ್ನಾದರೂ ಮಾಡಿದ್ದರೆ ಅದು |
| 1899 ರ 4ನೇ ಮಾರ್ಚ ದಿನಾಂಕದ ಅರ್ಜಿಯಲ್ಲಿ ಬರೆದಿದ್ದು ರೂ. 72-4-0 | 6. | ಹಿಂದಿನ ಅರ್ಜಿ ಯಾವುದಾದರೂ ಇದ್ದರೆ ಅದರ ದಿನಾಂಕ ಮತ್ತು ಫಲಿತಾಂಶ |
| ಅಸಲೂ ರೂ. 314-8-2- (ಡಿಕ್ರಿಯ ದಿನಾಂಕದಿಂದ ಸಂದಾಯದ ತನಕ ಶೇಕಡಾ ಅದರ ಮೇರೆಗಿನ ಬಡ್ಡಿ | 7. | ಡಿಕ್ರಿಯ ಮೇಲೆ ಬಡ್ಡಿ ಸಹಿತವಾಗಿ ಬಾಕಿ ಇರುವ ಮೊಬಲಗು ಅಥವಾ ಆ ಮೂಲಕ ಕೊಡಲಾದ ಇತರ ಪರಿಹಾರ ಮತ್ತು ಯಾವುದೇ ಎದುರು ಡಿಕ್ರಿಯ ವಿವರಗಳ |
| ರೂ. ಪೈ<br>ಡಿಕ್ರಿಯಲ್ಲಿ ಕೊಡಿಸಿದ್ದು 47.10.4 ತರುವಾಯು<br>ತಗುಲಿದ್ದು 8.2.0<br>ಒಟ್ಟು 55-12-20 | 8. | ಯಾವುವಾದರೂ ಖರ್ಚುಗಳನ್ನು ಕೊಡಿಸಿದ್ದರೆ, ಅದರ ಮೊಬಲಗು |
| ಪ್ರತಿಯಾದಿ ಗ, ಘ, ನ, ವಿರುದ್ಧ | 9. | ಯಾರ ವಿರುದ್ದವಾಗಿ ಅಮಲ್ಜಾ ಮಾಡಬೇಕು |

| | |
|---|---|
| (ಚರಸ್ವತ್ತಿನ ಜಪ್ತಿಯನ್ನು ಮತ್ತು ಮಾರಾಟವನ್ನು ಕೋರಿರುವಾಗ).................ರೂಪಾಯಿಗಳ ಒಟ್ಟು ಮೊಬಲಗನ್ನು (ಸಂದಾಯದವರೆಗೆ ಅಸಲು ಮೊತ್ತದ ಮೇಲಿನ ಬಡ್ಡಿಯೊಂದಿಗೆ) ಮತ್ತು ಈ ಅಮಲ್ಜಾರಿಯನ್ನು ಮಾಡಿಸಲು ತಗಲುವ ಖರ್ಚನ್ನು ಅನುಬಂಧಿತವಾದ ಪಟ್ಟಿಯ ಪ್ರಕಾರವಿರುವ ಪ್ರತಿವಾದಿಯ ಚರಸ್ವತ್ತನ್ನು ಜಪ್ತಿ ಮಾಡುವ ಮತ್ತು ಮಾರಾಟ ಮಾಡುವ ಮೂಲಕ ವಸೂಲು ಮಾಡಬೇಕೆಂದು ಮತ್ತು ನನಗೆ ಸಂದಾಯ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.<br><br>(ಸ್ಥಿರಸ್ವತ್ತಿನ ಜಪ್ತಿಯನ್ನು ಮತ್ತು ಮಾರಾಟವನ್ನು ಕೋರಿರುವಾಗ) ................ರೂಪಾಯಿಗಳ ಒಟ್ಟು ಮೊಬಲಗನ್ನು (ಸಂದಾಯದವರೆಗೆ ಅಸಲು ಮೊತ್ತದ ಮೇಲಿನ ಬಡ್ಡಿಯೊಂದಿಗೆ) ಮತ್ತು ಈ ಅಮಲ್ಜಾರಿಯನ್ನು ಮಾಡಿಸಲು ತಗಲುವ ಖರ್ಚನ್ನು ಈ ಅರ್ಜಿಯ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಪ್ರತಿವಾದಿಯ ಸ್ಥಿರಸ್ವತ್ತನ್ನು ಜಪ್ತಿ ಮಾಡುವ ಮೂಲಕ ಮತ್ತು ಮಾರಾಟ ಮಾಡುವ ಮೂಲಕ ವಸೂಲು ಮಾಡಬೇಕೆಂದು ಮತ್ತು ನನಗೆ ಸಂದಾಯ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ. | **ನ್ಯಾಯಾಲಯದ ನೆರವು ಯಾವ ಬಗೆಯಲ್ಲಿ ಅಗತ್ಯವಾಗಿದೆ.** |

**ಇಲ್ಲಿ ತಿಳಿಸಿರುವುದು ನನಗೆ ತಿಳಿದಿರುವಷ್ಟರ ಮತ್ತು ನಂಬಿಕೆಯಿರುವಷ್ಟರ ಮಟ್ಟಿಗೆ ಸತ್ಯವಾದುದೆಂದು ಎಂಬ ನಾನು ಘೋಷಿಸುತ್ತೇನೆ.**

**ಸಹಿ**

**ಡಿಕ್ರಿದಾರ**

**20..............ರ..................ನ............ನೇ ದಿನಾಂಕ.**

**(ಸ್ಥಿರ ಸ್ವತ್ತಿನ ಜಪ್ತಿಯನ್ನು ಮತ್ತು ಮಾರಾಟವನ್ನು ಕೋರಿದಾಗ).**

**ಸ್ವತ್ತಿನ ವರ್ಣನೆ ಮತ್ತು ತಪಶೀಲು.**

**.........................ಗ್ರಾಮದಲ್ಲಿರುವ ಮತ್ತು ಕೆಳಕಂಡ ಚಕ್ಕು ಬಂದಿಯುಳ್ಳ ಮನೆಯಲ್ಲಿ ತೀರ್ಪುಋಣಿಗೆ ಇರುವ 40 ರೂಪಾಯಿಯ ಬೆಲೆ ಬಾಳುವ ಅವಿಭಕ್ತವಾದ ಮೂರನೇ ಒಂದು ಭಾಗದ ಹಿಸೆ ಪೂರ್ವಕ್ಕೆ 'ಛ' ನ ಮನೆ; ಪಶ್ಚಿಮಕ್ಕೆ "ಜ"ನ ಮನೆ; ದಕ್ಷಿಣಕ್ಕೆ ಸಾರ್ವಜನಿಕ ರಸ್ತೆ; ಉತ್ತರಕ್ಕೆ ಖಾಸಗಿ ಓಣಿ ಮತ್ತು "ಝ" ನ ಮನೆ.**

**ಮೇಲಿನ ವರ್ಣನೆಯಲ್ಲಿ ತಿಳಿಸಿರುವುದು ನನಗೆ ತಿಳಿದಿರುವಷ್ಟರ ಮತ್ತು ನಂಬಿಕೆಯಿರುವಷ್ಟರ ಮಟ್ಟಿಗೆ, ಮತ್ತು ಇಲ್ಲಿ ನಿರ್ದಿಷ್ಟಪಡಿಸಲಾಗಿರುವ ಸ್ವತ್ತಿನಲ್ಲಿರುವ ಪ್ರತಿವಾದಿಯ ಹಿತಾಸಕ್ತಿಯನ್ನು ನಾನು ಖಚಿತಪಡಿಸಿಕೊಂಡಿರುವಷ್ಟರ ಮಟ್ಟಿಗೆ ಸತ್ಯವಾದುದೆಂದು .................... ಎಂಬ ನಾನು ಘೋಷಿಸುತ್ತೇನೆ.**

**ಸಹಿ,**

**ಡಿಕ್ರಿದಾರ**

**ನಂ. 7**

**ಅಮಲ್ಜಾರಿಯನ್ನು ಏಕೆ ಮಾಡಬಾರದೆಂಬುದಕ್ಕೆ ಕಾರಣ ತೋರಿಸಲು**

**ನೋಟೀಸು**

**(ಕ್ರ. XXI, ನಿ. 16)**

**Notice to Show Cause why Execution should not Issue**

**(O. 21, R.16)**

**(ಶೀರ್ಷಿಕೆ)**

**…………………ಗೆ**

**20…………….. ರ…………….. ನಂಬರಿನ ದಾವೆಯಲ್ಲಿನ ಡಿಕ್ರಿಯ ಅಮಲ್ಜಾರಿಗಾಗಿ ಸದರಿ ಡಿಕ್ರಿಯನ್ನು ಹಸ್ತಾಂತರದ ಮೂಲಕ (ಅಥವಾ ಹಸ್ತಾಂತರ ಮಾಡದೆಯೇ) ಅದನ್ನು ತನಗೆ ವರ್ಗಾಯಿಸಲಾಗಿದೆಯೆಂದು ಹೇಳಿ……………………. ನು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುವುದರಿಂದ, ಅಮಲ್ಜಾರಿಯನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ನೀನು 20…………. ರ………………. ನೇ ದಿನದಂದು ಈ…………………… ನ್ಯಾಯಾಲಯದಲ್ಲಿ ಹಾಜರಾಗಬೇಕೆಂದು ನಿನಗೆ ಈ ಮೂಲಕ ನೋಟೀಸನ್ನು ಕೊಡಲಾಗಿದೆ.**

**20…………ರ……………..ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.**

**ನ್ಯಾಯಾಧೀಶ**

**1.**

**2.**

## ನಂ. 8

## ಹಣದ ಬಗೆಗಿನ ಡಿಕ್ರಿಯ ಅಮಲ್ಜಾರಿಯಲ್ಲಿ

## ಚರಸ್ವತ್ತಿನ ಜಪ್ತಿಗಾಗಿ ವಾರಂಟು

**(ಕ್ರ. XXI, ನಿ. 30)**

**Warrant of Attachment of movable Property in Execution of a Decree for Money (O. 21, R.30)**

**(ಶೀರ್ಷಿಕೆ)**

**ನ್ಯಾಯಾಲಯದ ಅಮೀನನಿಗೆ,**

**ಈ ಕೆಳಗೆ ಕಾಣಿಸಿದಂತೆ...................... ರೂಪಾಯಿಗಳ ಮೊಬಲಗನ್ನು ವಾದಿಗೆ ಸಂದಾಯ ಮಾಡಬೇಕೆಂದು ಈ ನ್ಯಾಯಾಲಯವು 20...............ರ.............ನಂಬರಿನ ದಾವೆಯಲ್ಲಿ ಮೊಬಲಗನ್ನು.....................ಗೆ ಆದೇಶಿಸಿರುವುದರಿಂದ; ಮತ್ತು ಸದರಿ................... ರೂಪಾಯಿಗಳನ್ನು ಸಂದಾಯ ಮಾಡಿಲ್ಲದಿರುವುದರಿಂದ;**

**ಇದಕ್ಕೆ ಅನುಬಂಧಿಸಲಾಗಿರುವ ಅನುಸೂಚಿಯಲ್ಲಿ ವಿವರಿಸಿದಂತೆ, ಅಥವಾ ಸದರಿ................... ನಿಮಗೆ ತೋರಿಸುವಂತಹ ಸದರಿ.................ನ ಚರಸ್ವತ್ತನ್ನು ಜಪ್ತಿ ಮಾಡಬೇಕೆಂದು, ಮತ್ತು ಸದರಿ....... ನು ಸದರಿ. ರೂಪಾಯಿಗಳ ಮೊಬಲಗನ್ನು, ಈ ಜಪ್ತಿಗೆ ತಗುಲಿದ.................. ರೂಪಾಯಿಗಳ ಖರ್ಚಿನ ಜೊತೆಗೆ ಸಂದಾಯ ಮಾಡಿದ ಹೊರತು, ಈ ನ್ಯಾಯಾಲಯವು ಮುಂದೆ ಆದೇಶ ಮಾಡುವವರೆಗೆ ಅದನ್ನು ಇಟ್ಟುಕೊಂಡಿರಬೇಕೆಂದು ನಿಮಗೆ ಆಜ್ಞೆಯನ್ನು ಮಾಡಲಾಗಿದೆ.**

| ಡಿಕ್ರಿ | |
|---|---|
| ಅಸಲು<br>ಬಡ್ಡಿ<br>ಖರ್ಚುಗಳು<br>ಅಮಲ್ಜಾರಿಯ ಖರ್ಚುಗಳು<br>ಹೆಚ್ಚಿನ ಬಡ್ಡಿ | |
| ಒಟ್ಟು | |

**ಈ ವಾರಂಟನ್ನು 20..........ರ............... ನೇ ದಿನದಂದು ಅಥವಾ ಅದಕ್ಕೆ ಮುಂಚೆ, ಅದನ್ನು ಯಾವ ದಿನದಂದು ಮತ್ತು ಯಾವ ರೀತಿಯಲ್ಲಿ ಅಮಲ್ಜಾರಿ ಮಾಡಲಾಯಿತೆಂಬುದನ್ನು, ಅಥವಾ ಅದನ್ನು ಏಕೆ ಅಮಲ್ಜಾರಿ ಮಾಡಲಿಲ್ಲವೆಂಬುದನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ವಾಪಸ್ಸು ಮಾಡಬೇಕೆಂದು ನಿಮಗೆ ಮತ್ತೂ ಆಜ್ಞೆ ಮಾಡಲಾಗಿದೆ.**

**20....................................ರ.................................ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.**

**ನ್ಯಾಯಾಧೀಶ**

**ನಂ. 9**

## ಡಿಕ್ರಿಯ ಮೂಲಕ ನ್ಯಾಯ ನಿರ್ಣಿತವಾದ

## ಚರಸ್ವತ್ತಿನ ಅಭಿಗ್ರಹಣಕ್ಕಾಗಿ ವಾರಂಟು

**(ಕ್ರ. XXI, ನಿ. 31)**

**Warrant for Seizure of Specific Movable Property Adjudged by Decree (O. 21, R.31)**

**(ಶೀರ್ಷಿಕೆ)**

**ನ್ಯಾಯಾಲಯದ ಅಮೀನನಿಗೆ,**

**ಇದಕ್ಕೆ ಅನುಬಂಧಿಸಿದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಚರಸ್ವತ್ತನ್ನು (ಅಥವಾ ಚರಸ್ವತ್ತಿನಲ್ಲಿ.................... ಹಿಸ್ಸೆಯನ್ನು) ವಾದಿಗೆ ವಶಾವಣೆ ಮಾಡಬೇಕೆಂದು ಈ ನ್ಯಾಯಾಲಯವು 20........... ರ........... ನಂಬರಿನ ದಾವೆಯಲ್ಲಿ 20......... ರ......... ನೇ ದಿನದಂದು ಮಾಡಿದ ಡಿಕ್ರಿಯ ಮೂಲಕ .........................ಗೆ ಆದೇಶಿಸಿರುವುದರಿಂದ ಮತ್ತು ಸದರಿ ಸ್ವತ್ತನ್ನು (ಅಥವಾ ಅದರ ಹಿಸ್ಸೆಯನ್ನು ವಶಾವಣೆ ಮಾಡಿಲ್ಲದಿರುವುದರಿಂದ,**

**ಸದರಿ ಚರಸ್ವತ್ತನ್ನು (ಅಥವಾ ಸದರಿ ಚರಸ್ವತ್ತಿನ)........................... ಹಿಸ್ಸೆಯನ್ನು ಅಭಿಗ್ರಹಣ ಮಾಡಲು ಮತ್ತು ಅದನ್ನು ವಾದಿಗೆ ಅಥವಾ ಈ ಬಗ್ಗೆ ಅವನು ನೇಮಿಸಬಹುದಾದಂತಹ ವ್ಯಕ್ತಿಗೆ ವಶಾವಣೆ ಮಾಡಲು ನಿನಗೆ ಆಜ್ಞೆ ಮಾಡಲಾಗಿದೆ.**

**20...................... ರ....................... ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.**

**ನ್ಯಾಯಾಧೀಶ**

**ನಂ.10**

## ದಸ್ತಾವೇಜಿನ ಕರಡಿನ ಬಗೆಗಿನ ಆಕ್ಷೇಪಗಳನ್ನು ತಿಳಿಸುವುದಕ್ಕಾಗಿ ನೋಟೀಸು

**(ಕ್ರ. XXI, ನಿ. 34)**

**Notice to State Objections to Draft of Document**

**(O. 21, R.34)**

**(ಶೀರ್ಷಿಕೆ)**

**..........................ಗೆ**

**ಈ ಕೆಳಗೆ ನಿರ್ದಿಷ್ಟಪಡಿಸಿದ ಸ್ಥಿರಸ್ವತ್ತಿನ ಯಾವ.......................... ಪತ್ರದ ಕರಡನ್ನು ಇದಕ್ಕೆ ಅನುಬಂಧಿಸಲಾಗಿದೆಯೋ ಆ................ ಪತ್ರವನ್ನು ನ್ಯಾಯಾಲಯವು ನಿಮ್ಮ ಪರವಾಗಿ ಬರೆದುಕೊಡಬಹುದೆಂದು ಕೇಳಿ ನ್ಯಾಯಾಲಯಕ್ಕೆ ಮೇಲಿನ ದಾವೆಯಲ್ಲಿನ ಡಿಕ್ರಿದಾರನು 20................ರ...................ನ.......................... ದಿನದಂದು ಅರ್ಜಿಯನ್ನು ಸಲ್ಲಿಸಿದ್ದಾನೆ ಎಂದು, ಮತ್ತು ಸದರಿ ಅರ್ಜಿಯನ್ನು ಸುನಾವಣೆ ಮಾಡುವುದಕ್ಕಾಗಿ 20............ ರ................ನೇ ದಿನವನ್ನು ಗೊತ್ತುಪಡಿಸಲಾಗಿದೆಯೆಂದು ಮತ್ತು ಸದರಿ ದಿನದಂದು ಹಾಜರಾಗಲು ಹಾಗೂ ಸದರಿ ಕರಡಿನ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಬರಹದಲ್ಲಿ ತಿಳಿಸಲು ನೀವು ಸ್ವತಂತ್ರರಿದ್ದೀರೆಂದು ನಿಮಗೆ ನೋಟೀಸು ಕೊಡಲಾಗಿದೆ.**

**20........................ ರ ................................ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.**

**ನ್ಯಾಯಾಧೀಶ**

**ನಂ.11**

## ಭೂಮಿ ಇತ್ಯಾದಿಯ ಸ್ವಾಧೀನವನ್ನು ಒಪ್ಪಿಸಲು ಅಮೀನನಿಗೆ ವಾರಂಟು

**(ಕ್ರ. XXI, ನಿ. 35)**

**Warrant to the Bailiff to Give Possession of Land etc.**

**(O. 21, R.35)**

**(ಶೀರ್ಷಿಕೆ)**

**ನ್ಯಾಯಾಲಯದ ಅಮೀನನಿಗೆ,**

**.......................ನ ಅಧಿಭೋಗದಲ್ಲಿರುವ ಈ ಕೆಳಗೆ ನಮೂದಿಸಲಾಗಿರುವ ಸ್ವತ್ತನ್ನು ಈ ದಾವೆಯಲ್ಲಿನ ವಾದಿಯಾದ...................... ನಿಗೆ ಡಿಕ್ರಿ ಮಾಡಿರುವುದರಿಂದ; ಅದನ್ನು ಸದರಿ ...................ನ ಸ್ವಾಧೀನಕ್ಕೆ ಒಪ್ಪಿಸಬೇಕೆಂದು ನಿನಗೆ ಈ ಮೂಲಕ ನಿರ್ದೇಶಿಸಲಾಗಿದೆ. ಮತ್ತು ಡಿಕ್ರಿಗೆ ಬದ್ಧನಾಗಿದ್ದು ಅದನ್ನು ಬಿಟ್ಟುಕೊಡಲು ನಿರಾಕರಣೆ ಮಾಡುವ ಯಾವನೇ ವ್ಯಕ್ತಿಯನ್ನು ಹೊರಹಾಕಲು ನಿನ್ನನ್ನು ಈ ಮೂಲಕ ಅಧಿಕೃತಗೊಳಿಸಲಾಗಿದೆ.**

**20........................ ರ........................ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.**

**ನ್ಯಾಯಾಧೀಶ**

**ನಂ. 12**

**ದಸ್ತಗಿರಿ ವಾರಂಟನ್ನು ಏಕೆ ಹೊರಡಿಸಬಾರದೆಂಬುದಕ್ಕೆ ಕಾರಣವನ್ನು**

**ತೋರಿಸಲು ನೋಟೀಸು**

**(ಕ್ರ . XXI, ನಿ. 37)**

**Notice to Show Cause why Warrant of Arrest should not Issue**

**(ಶೀರ್ಷಿಕೆ)**

**........................ಗೆ,**

**20.........................ರ....................ನಂಬರಿನ ದಾವೆಯಲ್ಲಿನ ಡಿಕ್ರಿಯನ್ನು, ನಿಮ್ಮನ್ನು ದಸ್ತಗಿರಿ ಮಾಡುವುದರ ಮತ್ತು ಕಾರಾಗೃಹದಲ್ಲಿಡುವುದರ ಮೂಲಕ ಅಮಲ್ಜಾರಿಗೊಳಿಸಬೇಕೆಂದು............................ನು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುವುದರಿಂದ, ಸದರಿ ಡಿಕ್ರಿಯನ್ನು ಅಮಲ್ಜಾರಿಯಲ್ಲಿ ನಿಮ್ಮನ್ನು ಏಕೆ ಸಿವಿಲ್ ಬಂದೀಖಾನೆಗೆ ಒಪ್ಪಿಸಬಾರದೆಂದು ಕಾರಣವನ್ನು ತೋರಿಸಲು ನೀವು 20..............ರ............ನ..............ನೇ ದಿನದಂದು ಈ ನ್ಯಾಯಾಲಯದಲ್ಲಿ ಹಾಜರಾಗಬೇಕೆಂದು ನಿಮ್ಮನ್ನು ಈ ಮೂಲಕ ಅಗತ್ಯಪಡಿಸಲಾಗಿದೆ.**

**20........................ ರ......................... ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.**

**ನ್ಯಾಯಾಧೀಶ**

**ನಂ. 13**

## ಅಮಲ್ಜಾರಿಯಲ್ಲಿ ದಸ್ತಗಿರಿ ವಾರಂಟು

**(ಕ್ರ. XXI, ನಿ. 38)**

**Warrant of Arrest in Execution (O. 21, R.38)**

**(ಶೀರ್ಷಿಕೆ)**

ನ್ಯಾಯಾಲಯದ ಅಮೀನನಿಗೆ,

ಈ ಕೆಳಗೆ ನಮೂದಿಸಿರುವ.........................ರೂ.ಗಳ ಮೊತ್ತವನ್ನು ಡಿಕ್ರಿದಾರನಿಗೆ ಸಂದಾಯ ಮಾಡಬೇಕೆಂದು 20........ ರ......... ನ....... ನೇ ದಿನಾಂಕದ 20........... ನಂಬರಿನ ದಾವೆಯಲ್ಲಿ ಡಿಕ್ರಿಯ ಮೂಲಕ...................ನು ನ್ಯಾಯನಿರ್ಣಿತನಾಗಿರುವುದರಿಂದ ಮತ್ತು ಸದರಿ ಡಿಕ್ರಿಯ ಸಮಾಧಾನಕ್ಕಾಗಿ.................... ರೂಪಾಯಿಗಳ ಮೊತ್ತವನ್ನು ಸದರಿ ಡಿಕ್ರಿದಾರನಿಗೆ ಸಂದಾಯ ಮಾಡಿಲ್ಲದಿರುವುದರಿಂದ, ಸದರಿ ತೀರ್ಪುಋಣಿಯನ್ನು ದಸ್ತಗಿರಿ ಮಾಡಬೇಕೆಂದು ಮತ್ತು ಸದರಿ ತೀರ್ಪುಋಣಿಯು ಸದರಿ........................ ರೂಪಾಯಿಗಳ ಮೊತ್ತವನ್ನು ಹಾಗೂ ಈ ಆದೇಶಿಕೆಯನ್ನು ಅಮಲ್ಜಾರಿಗೊಳಿಸುವ ಖರ್ಚುಗಳಿಗಾಗಿ..............ರೂಪಾಯಿಗಳನ್ನು ನಿಮಗೆ ಸಂದಾಯ ಮಾಡಿದ್ದಲ್ಲದೇ, ಸದರಿ ಪ್ರತಿವಾದಿಯನ್ನು ಅನುಕೂಲವಾದಷ್ಟು ಬೇಗನೆ ಈ ನ್ಯಾಯಾಲಯದ ಮುಂದೆ ಕರೆತರಬೇಕೆಂದು ನಿನಗೆ ಆಜ್ಞೆ ಮಾಡಲಾಗಿದೆ.

| | | | |
|---|---|---|---|
| ಡಿಕ್ರಿ | | | |
| ಅಸಲು<br>ಬಡ್ಡಿ<br>ಖರ್ಚುಗಳು<br>ಅಮಲ್ಜಾರಿ | | | |
| ಒಟ್ಟು: | | | |

ಈ ವಾರಂಟನ್ನು 20................... ರ.......... ನ............. ನೇ ದಿನದಂದು ಅಥವಾ ಅದಕ್ಕೆ ಮುಂಚೆ, ಅದನ್ನು ಯಾವ ದಿನದಂದು ಮತ್ತು ಯಾವ ರೀತಿಯಲ್ಲಿ ಅಮಲ್ಜಾರಿ ಮಾಡಲಾಯಿತೆಂಬುದನ್ನು ಅಥವಾ ಅದನ್ನು ಏಕೆ ಅಮಲ್ಜಾರಿ ಮಾಡಲಿಲ್ಲವೆಂಬುದನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ವಾಪಸ್ಸು ಮಾಡಬೇಕೆಂದು ನಿಮಗೆ ಮತ್ತೂ ಆಜ್ಞೆಯನ್ನು ಮಾಡಲಾಗಿದೆ.

20.........................ರ............................ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ನ್ಯಾಯಾಧೀಶ

ಕರ್ನಾಟಕ ಉಚ್ಚ ನ್ಯಾಯಾಲಯ ತಿದ್ದುಪಡಿ (ಅನುಬಂಧ-ಇ)

"ಈ ಕಲಾಪವನ್ನು ಜಾರಿಗೊಳಿಸುವುದರ ಖರ್ಚುಗಳ" ಎಂಬ ಪದಗಳ ನಂತರ | ಕೆಳಕಂಡುದನ್ನು ದಿನಾಂಕ 09-02-1967ರ ಅಧಿಸೂಚನೆ ಸಂಖ್ಯೆ: ಆರ್.ಓ.ಸಿ. ಸಂಖ್ಯೆ. 2526/1959 (30-3-1967 ರಿಂದ ಜಾರಿಗೊಳಿಸಲಾಗಿದೆ) ರಿಂದ ಸೇರಿಸಲಾಗಿದೆ.

ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ ಮೊದಲನೆ ಷೆಡ್ಯೂಲಿನ ಆದೇಶ XXI ರ ನಿಯಮ 25ರ ಉಪ-ನಿಯಮ (3) ರ ನಿಗದಿಪಡಿಸಿದ ಮೇರೆಗೆ ವಾರಂಟಿನ ಮೇಲೆ ಡಿಕ್ರಿದಾರನು ಡಿಕ್ರಿಯ ಆಶಯವು ತೃಪ್ತಗೊಳಿಸಲಾಗಿದೆಯೆಂದು ಹಿಂಬರಹ ಮಾಡದ ಹೊರತು.

**ನಂ. 14**

**ತೀರ್ಪುಋಣಿಯನ್ನು ಜೈಲಿಗೆ ಒಪ್ಪಿಸುವ ವಾರಂಟು**

**(ಕ್ರ. XXI, ನಿ. 40)**

**Warrant of Committal of Judgment-debtor to Jail**

**(O. 21, R.40)**

**(ಶೀರ್ಷಿಕೆ)**

**......................ನಲ್ಲಿನ ಜೈಲಿನ ಆಡಳಿತವನ್ನು ನೋಡಿಕೊಳ್ಳುವ ಅಧಿಕಾರಿಗೆ,**

**ಸದರಿ ನ್ಯಾಯಾಲಯವು 20......................... ರ............... ನ.................ನೇ ದಿನದಿಂದ ಮಾಡಿದ ಮತ್ತು ಉಚ್ಚರಿಸಿದ ಡಿಕ್ರಿಯ ಅಮಲ್ಜಾರಿಯಲ್ಲಿನ ವಾರಂಟಿನ ಮೇರೆಗೆ 20..................ರ....................ನ....................... ನೇ ದಿನದಂದು................. ನನ್ನು ಈ ನ್ಯಾಯಾಲಯದ ಮುಂದೆ ಕರೆತರಲಾಗಿದ್ದು, ಮತ್ತು ಸದರಿ............... ನ......................ರೂಪಾಯಿಗಳನ್ನು ಸಂದಾಯ ಮಾಡಬೇಕೆಂದು ಡಿಕ್ರಿಯಲ್ಲಿ ಆದೇಶಿಸಿರುವುದರಿಂದ; ಮತ್ತು ಸದರಿ...................... ನು ಡಿಕ್ರಿಯನ್ನು ಪಾಲಿಸದೇ ಇರುವುದಲ್ಲದೆ ತಾನು ಅಭಿರಕ್ಷೆಯಿಂದ ವಿಮೋಚಿತನಾಗಲು ತನಗೆ ಹಕ್ಕಿದೆಯೆಂಬ ಬಗ್ಗೆ ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಟ್ಟಿಲ್ಲದಿರುವುದರಿಂದ ಸದರಿ..................... ನನ್ನು ಸಿವಿಲ್ ಬಂದೀಖಾನೆಗೆ ಸೇರಿಸಿಕೊಳ್ಳಬೇಕೆಂದು ಮತ್ತು ಅವನನ್ನು ....................ಗೆ ಮೀರದ ಅವಧಿಯವರೆಗೆ ಅಥವಾ ಸದರಿ ಡಿಕ್ರಿಯು ಪೂರ್ಣವಾಗಿ ಸಮಾಧಾನವಾಗುವವರೆಗೆ, ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 58ನೇ ಪ್ರಕರಣದ ನಿಬಂಧನೆಗಳಿಗೆ ಮತ್ತು ಉಪಬಂಧಗಳಿಗೆ ಅನುಸಾರವಾಗಿ ಬಿಡುಗಡೆ ಹೊಂದಲು ಅನ್ಯಥಾ ಹಕ್ಕುಳ್ಳವನಾಗುವವರೆಗೆ ಕಾರಾಗೃಹದಲ್ಲಿಡಬೇಕೆಂದು ನಿಮಗೆ ಈ ಮೂಲಕ ಆಜ್ಞೆ ಮಾಡಲಾಗಿದೆ ಮತ್ತು ಅಗತ್ಯಪಡಿಸಲಾಗಿದೆ; ಮತ್ತು ಒಪ್ಪಿಸಿಕೊಡುವುದಕ್ಕೆ ಸಂಬಂಧಿಸಿದ ಈ ವಾರಂಟಿನ ಮೇರೆಗೆ ಸದರಿ ...................ನು ಬಂಧನದಲ್ಲಿರುವ ಕಾಲದಲ್ಲಿ ಅವನ ಜೀವನ ನಿರ್ವಹಣೆಗಾಗಿ ದಿನವೊಂದಕ್ಕೆ.............. ದರದಲ್ಲಿ ಮಾಸಿಕ ಭತ್ಯೆಯನ್ನು ನ್ಯಾಯಾಲಯವು ಈ ಮೂಲಕ ಗೊತ್ತುಪಡಿಸುತ್ತದೆ.**

**20...............ರ....................ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.**

**ನ್ಯಾಯಾಧೀಶ**

**ನಂ. 15**

## ಡಿಕ್ರಿಯ ಅಮಲ್ಜಾರಿಯಲ್ಲಿ ಕಾರಾಗೃಹದಲ್ಲಿಡಲಾದ ವ್ಯಕ್ತಿಯ ಬಿಡುಗಡೆಗಾಗಿ ಆದೇಶ (ಪ್ರಕರಣಗಳು 58, 59)

**Order for the Release of a Person Imprisoned in Execution of a Decree (Ss. 58, 59)**

**(ಶೀರ್ಷಿಕೆ)**

**..........................ನಲ್ಲಿನ ಜೈಲಿನ ಆಡಳಿತವನ್ನು ನೋಡಿಕೊಳ್ಳುವ ಅಧಿಕಾರಿಗೆ,**

**ಈ ದಿನದಂದು ಮಾಡಿದ ಆದೇಶಗಳ ಮೇರೆಗೆ, ನಿಮ್ಮ ಅಭಿರಕ್ಷೆಯಲ್ಲಿರುವ ತೀರ್ಪು ಋಣಿಯಾದ..........................ನನ್ನು ಮುಕ್ತಗೊಳಿಸಬೇಕೆಂದು ನಿಮಗೆ ಈ ಮೂಲಕ ನಿರ್ದೇಶಿಸಲಾಗಿದೆ.**

**ದಿನಾಂಕ..................**

**ನ್ಯಾಯಾಧೀಶ**

**ಕರ್ನಾಟಕ ಉಚ್ಚ ನ್ಯಾಯಾಲಯ ತಿದ್ದುಪಡಿ (ಅನುಬಂಧ-ಇ)**
**ದಿನಾಂಕ 01-08-1967ರ ಅಧಿಸೂಚನೆ ಸಂಖ್ಯೆ: ಆರ್ಒಸಿ. ಸಂಖ್ಯೆ. 2526/1959**
**(01-09-1967 ರಿಂದ ಜಾರಿಗೊಳಿಸಲಾಗಿದೆ) ರಿಂದ ಸೇರ್ಪಡೆ**
**ಮಾಡಲಾದ ನಮೂನೆ 15-ಎ**

**ಸಂಖ್ಯೆ 15-ಎ**

**..........................ದ...........................ಘನ ನ್ಯಾಯಾಲಯದಲ್ಲಿ ಸಿವಿಲ್ ದಾವೆ**

**ಸಂಖ್ಯೆ............./20.............**

**.................................**

**ವಾದಿ**
**ಡಿಕ್ರಿದಾರರು**
**ಪ್ರತಿವಾದಿ**

**ವಿರುಧ್ದ**

**............................. ತೀರ್ಪು-ಋಣಿದಾರರು**

**ಈ ಸಲ್ಲಿಸುವಿಕೆಯಿಂದ ಸಮಸ್ತರೂ ತಿಳಿದುಕೊಳ್ಳುವುದೇನೆಂದರೆ, ನಾವು (ಇಲ್ಲಿ ಜಾರಿದಾರರ ಹೆಸರುಗಳನ್ನು ನಮೂದಿಸಿರಿ).................... ಜಂಟಿಯಾಗಿಯೂ ಮತ್ತು ವೈಯಕ್ತಿಕವಾಗಿಯೂ......................... ನ್ಯಾಯಾಲಯದ ನ್ಯಾಯಾಧೀಶರಿಗೆ ರೂ....................ಗಳಿಗೆ ಸದರಿ ನ್ಯಾಯಾಧೀಶರಿಗೆ ಪಾವತಿಸಲು ಬದ್ದರಾಗಿರುತ್ತೇವೆ ಮತ್ತು ಈ ಸಲ್ಲಿಸುವಿಕೆಯಿಂದ ಅಂತಹ ಪಾವತಿಯನ್ನು ಮಾಡಲು ನಾವು, ನಮ್ಮಲ್ಲಿ ಪ್ರತಿಯೊಬ್ಬರೂ ಪೂರ್ಣವಾಗಿ ನಾವು ಮತ್ತು ನಮ್ಮಲ್ಲಿ ಪ್ರತಿಯೊಬ್ಬರ ವಾರಸುದಾರರು, ಜಾರಿದಾರರು ಮತ್ತು ಆಡಳಿತದಾರರು ಜಂಟಿಯಾಗಿಯೂ ವೈಯಕ್ತಿಕವಾಗಿಯೂ ಬದ್ಧರಾಗಿರುತ್ತಾರೆ.**

**20.................ರ.................ದಿನಾಂಕ.....................................**

ಇಲ್ಲಿ ಅನುಬಂಧಿಸಲಾದ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಿದ ಚರಾಸ್ತಿಗಳನ್ನು ಸದರಿ ನ್ಯಾಯಾಲಯದಿಂದ......................20.....................ರ..............................ದಾವಾಸಂಖ್ಯೆ................ಯಲ್ಲಿ.......... ..................ಪರವಾದ ಡಿಕ್ರಿ ಆದೇಶದ ಅಮಲ್ಜಾರಿಯಲ್ಲಿ 20................ ರ............ ದಿನ..........................ದಿನಾಂಕದಂದು ಜಪ್ತಿಗೊಳಿಸಲಾಗಿದೆ ಮತ್ತು ಸದರಿ ಸ್ವತ್ತು ಶ್ರೀ.............................ಯವರ ಉಸ್ತುವಾರಿಯಲ್ಲಿದೆ.

ಈಗ ಈ ಬದ್ಧತೆಯ ಸ್ಥಿತಿಯೇನೆಂದರೆ, ಒಂದು ವೇಳೆ ಮೇಲ್ಕಂಡ...................... ಬದ್ಧತೆದಾರರು

ಮೇಲೆ ಹೇಳಿದಂತಹ ಎಲ್ಲಾ ಮತ್ತು ಪ್ರತಿಯೊಂದು ಸ್ವತ್ತುಗಳ ಸೂಕ್ತ ಲೆಕ್ಕವಿಟ್ಟಿದ್ದು ಮತ್ತು ಸದರಿ ನ್ಯಾಯಾಲಯವು ಅಗತ್ಯಪಡಿಸಿದಾಗ ಹಾಜರುಪಡಿಸಿದರೆ ಮತ್ತು ಈ ಸಂಬಂಧ ನ್ಯಾಯಾಲಯದ ಯಾವುದೇ ಮುಂದಿನ ಆದೇಶಗಳನ್ನು ಪಾಲಿಸಿದರೆ ಈ ಬದ್ಧತೆಯು ಅಸಿಂಧುವಾಗುತ್ತದೆ; ಇಲ್ಲದಿದ್ದರೆ

ಬದ್ಧತೆಯು ಪೂರ್ಣವಾಗಿ ಜಾರಿಯಲ್ಲಿರುತ್ತದೆ.

(ಜಾರಿದಾರರ ಸಹಿಗಳನ್ನು ಇಲ್ಲಿ ಹಾಕತಕ್ಕುದು)

ಹಾಜರಿರುವ (ಇಲ್ಲಿ ಸಾಕ್ಷಿದಾರರ ಹೆಸರುಗಳನ್ನು ನಮೂದಿಸಿರಿ)......................ಸಮಕ್ಷಮದಲ್ಲಿ ಮೇಲ್ಕಂಡ ಬದ್ಧತೆದಾರರಾದ....................ರಿಂದ ಸಹಿ ಮಾಡಲ್ಪಟ್ಟು ನೀಡಲಾಗಿದೆ.

(ಸಾಕ್ಷಿದಾರರ ಸಹಿಗಳನ್ನು ಇಲ್ಲಿ ಹಾಕತಕ್ಕುದು)

**ನಂ. 16**

**ಅಮಲ್ಜಾರಿಯಲ್ಲಿ ಜಪ್ತಿ**

**Attachment in Execution**

**(ಶೀರ್ಷಿಕೆ)**

**ಜಪ್ತಿ ಮಾಡಬೇಕಾದ ಸ್ವತ್ತು, ಧಾರಣಾಧಿಕಾರಕ್ಕೆ ಅಥವಾ ಸ್ವತ್ತಿನ ನಿಕಟ ಸ್ವಾಧೀನಕ್ಕೆ ಇತರ ವ್ಯಕ್ತಿಗಿರುವ ಹಕ್ಕಿಗೆ ಒಳಪಟ್ಟು ಪ್ರತಿವಾದಿಯು ಯಾವ ಚರಸ್ವತ್ತಿಗೆ ಹಕ್ಕುಳ್ಳುವನಾಗಿರುತ್ತಾನೋ ಆ ಚರಸ್ವತ್ತನ್ನು ಒಳಗೊಂಡಿದ್ದಲ್ಲಿ, ನಿಷೇಧಾಜ್ಞೆ**

**(ಕ್ರ. XXI, ನಿ. 46)**

